ಮು. ನಂ. ೬೫೧೧ ಕಿಲ್ಲೆದಲ್ಲಿ ಶ್ರೀ. ಜೋಬಳಕರ ಇವರ ಬಂಗ್ಲೇಪ ಎದುರಿನಲ್ಲಿ ಮಿ. ಫೆರ್ನಾಂಡಿಸರು ಬಾಡಿಗೆಯಿಂದಿರೋದು.

ಸೂಚನೆ– ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳಬೇಕಾದ ಬೆಲೆ ಮತ್ತು ಜೀರೆ ಮಾಹಿತಿಯನ್ನು ಸಂವಾದಕ ವಿಜಯ ಇವರಿಗೆ ತಿಳಿಯಬೇಕು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೆಬಸೂರಕರ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B 1443

ನಿತ್ಯ ಪತ್ರ

ವಿಜಯ

ಬೆಲೆಆದಕ್ಕಾಲಣ್ಣೆ

ಸಂಪಾದಕರು:- ಅಣ್ಣಾ ಚಾಯ ಕಿ ಬಾಳಾಚಾಯ್ ಹೊಸಕೇರಿ.

ವರ್ಷ ೧೩ ಧಾರವಾಡ ಬುಧವಾರ ತಾರೀಖು ೨೧ ನೇ ಜನೇವರಿ ೧೯೩೧ (ಸಂಚಿಕೆ ೧೬

ಮೂರಾಟಕ್ಕೆ ಸಿದ್ಧವಾಗಿದೆ

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದಿ ಶ್ರೀ ಸಿದ್ಧಾವದೂತರ ಅಸಲಿದಿ, ಶ್ರೀ ಅವಧೂತಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕಳ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎಡೇ ಸಾವಿರ ಪ್ರತಿಗಳನ್ನು ಕೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರ ತುಸುವೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಪಿಯು ಬೇರೆ ಬೇರೆ ಪ್ರತಿಗಳನ್ನು ಬೇಡವೆಂದು ಪ್ರತಿಯೊಂದಕ್ಕೆ ಎದುರಿನಲ್ಲಿ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಂದೇ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ತಾಂತ್ರಿಕ ಶಿಕ್ಷಣ

ದಿ ಕರ್ನಾಟಕ ಟೀಚರ್ಸ ಮತ್ತು ಕಟಿಂಗ ಕಾಲೇಜ

ಧಾರವಾಡ ಮಾರ್ಕೆಟ್.

ಇವು ದೇಶಿ ಮತ್ತು ಇಂಗ್ಲೀಷ ಪದ್ಧತಿಯಂತೆ ಕಟಿಂಗ ಅಂದರೆ ಅಳತೆ ತೆಗೆದುಕೊಳ್ಳುವ ಮತ್ತು ಟೇಲರಿಂಗ ಅಂದರೆ ಅಳತೆ ಹೊಲಿಯುವ ಸಚಿತ್ರಶಿಕ್ಷಣ ಕೊಡುತ್ತೇವೆ. ಫಸ್ಟ ಕಟಿಂಗ ಮುದಕ ಎರಡು ತಿಂಗಳ ಪಾರ್ಟ ಟೇಲರಿಂಗ ಮುದಕ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ ಫಸ್ಟ ಕಟಿಂಗ ಜಾಕೆಟ್ಟಿಗೆ ರೂಪಾಯಿ ೫ ಮತ್ತು ಟೇಲರಿಂಗ ಗಿಮ್ ಹುನೆಮ ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ದೇಶಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯು ತನ್ನ ವರ್ಷಾಸನ ಪ್ರಕಾರ ತಿಂಗಳಾ ಕನಿಷ ಅರವತ್ತು ರೂಪಾಯಿ ಗಳಸುಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕೀಟು ಕಳಸಬೇಕು.

ಆರ್. ಬಿ. ಮುಧೋಳಕರ
ಫಸ್ಟಕ್ಲಾಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ-ಆಪರೇಟಿವ್ ಬ್ಯಾಂಕ ಲಿಮಿಟೆಡ

ಮುಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಕ್ಷಿಣೆ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಶೇರು ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಯಮ ಮತ್ತು ಬೇರೆ ಕರೆವ ಡಿವಾಜಿಟುಗಳಿಗೆ ಜಾಸ್ತಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳದೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಾಧ್ವರಾವ ಜಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೩ ತಿಂಗಳಿಗೆ	ರೂ. ೧೩-೮-೦
೬ "	೭-೦-೦
೩ "	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೫-೧೩-೦

ವಿಶೇಷ ಮಾಹಿತಿ ತಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿರಿ

ಮ್ಯಾ ವಿಜಯ ಧಾರವಾಡ

ನೋಟೀಸಿನದರಗಳು

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಂಕ್ತಿಗೆ ಐದು ಆಣ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೈಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿಂದ ಅವಾಲಿಸಿ. ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಹೊಲಿ ಕಾಲಮಿನ ಪಂಕ್ತಿಗಳಿಗೆ ಇಮ್ಮಡಿ ದರ್ಜೆ ಕಾಯಂ ಜಾಹಿರಾತುಗಳನ್ನು ಕೊಡುವವರು ತಳಿಸಿ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಳುಕ್ಕ ವಿಕ್ರಮ ವರ್ಷ ಮಾಘ ಶುದ್ಧ ೬

ಟೌನ್ಹಿಯಲ್ಲಿ ಲಾರ್ಡ ಆಯವಿರ್ನಸಾಹೇಬರ ಭಾಷಣ

—(೨)—

ಶನಿವಾರ ದಿವಸ ಲಾರ್ಡ ಆಯವಿರ್ನಸಾಹೆಬರು ಹೊಸ ಅಸೆಂಬ್ಲಿಯ ಮುಂದೆ ಹಿಂದುಸ್ಥಾನದ ಸದೇಶ ಹಾಗು ಸಂದೇಶದ ಕಾರಭಾರವನ್ನೆ ರಿತು ಭಾಷಣ ಮಾಡಿದರು. ಅದರ ಮುಖ್ಯಾಂಶಗಳು –

೧ ಪರದೇಶಗಳೆ ಕೂಡ ಹಿಂದುಸ್ಥಾನವು ಸ್ವೇ ವಾಗಿರುವದು.

೨ ವಾಯವ್ಯ ಸರಹದ್ದಿನಲ್ಲಿರುವ ಅಫ್ರಿಡಿ ಜನ ಕೂಡ ರಾಜೆಯ ರೀತಿಯಿಂದ ಪ್ರಸ್ತಾಪ ನಡೆದೆ.

೩ ದಕ್ಷಿಣ ಅಫ್ರಿಕೆಯಲ್ಲಿರುವ ಹಿಂದೀ ಜನರಿಗಾಗುತ್ತಿರುವ ಅನ್ಯಾಯಗಳ ಹರಿವಾಜಿನೆಯು ಮಾಧಾನತಾಗಿ ಕೊನೆಗಾಣುವದೆಂಬ ಅಶೆ ಯುಂಟು

೪ ಪೂರ್ವ ಆಫ್ರಿಕೆಯಲ್ಲಿರುವ ಹಿಂದೀ ಜನರಿಗಾಗುವ ಅನ್ಯಾಯಗಳ ಪಾರ್ಲಮೆಂಟಿದ ಚೌಯಿಂ ಕಮೀಟಿ ಕೂಡಿದ್ದು, ಅದರ ಮುಂದೆ ಹಿಂದೀ ಜನರ ಪಕ್ಷ ವಿಡಿದು ವಾದವಿವಾದ ಮಾಡಲು – ನಾಮದಾರ ಶ್ರೀನಿವಾಸಶಾಸ್ತ್ರಿಯವರು ಕೆಲಸ ಮಾ ವಳ್ಳೊಪ್ಪಿಸಿದ್ದಾರೆ.

ಒಳದೇಶದ ಬಗ್ಗೆ ಮಾತಾಡುವಾಗ ಲಾರ್ಡ ಸಾಹೇಬರು ಮಹಾತ್ಮರ ಧಾರ್ಮಿಕ ಶಕ್ತಿಯ ಅಭಿ ನಂದನ ಮಾಡಿ, "ಬ್ರಿಟಿಶ ಸರಕಾರವನ್ನು ಬುಡ ಮೇಲು ಮಾಡುವ ಪ್ರಯತ್ನ ನಡೆದಿದ್ದುವಷ್ಟಕ, ಅ ದನ್ನು ನಿರ್ಮೂಲ ಮಾಡುವದು ಸರಕಾರದ ಕರ್ತ ವ್ಯವೇ ಆಗುತ್ತದೆ. ಸಂಸ್ಥಾನಿಕರು ಫೇಡರೇಶನ ದಲ್ಲಿ ಬಂದದ್ದು ಸ್ವಾಗತಾರ್ಹವಾಯಿತು. ಸೂರು ವರ್ಷ ಗಳನಂತರ ಅದರ ಫಲ ತಂಡು ಹೋಗುವದು. ಮಹಾ ತ್ಮರೂ ಮಿಕ್ಕು ಕಾಂಗ್ರೆಸದವರೂ "ರಾವ್ಹಂಡ್ ಟೇಬಲದಲ್ಲಿನ್ನಾದ ಡಾರ್ಕ್ಯನ್ನು ತೋಡಿ, ಅದರಿಂದಾಚೆಗೆ ಗುವ, ಪರಸ್ಪರ ಮೈತ್ರಿಯಾಗುವಂಥ ರೀತಿಯ ನ್ನು ಹುಡುಕಿ ತೆಗೆಯುವೆವೆಂದು ಆಶಿಸುತ್ತೇವೆಂದು ನಿಡ್ದಾನೆ.

ಲಾರ್ಡ ಸಾಹೇಬರು ಮಹಾತ್ಮರ ವಿಷಯವಾಗಿ ತಮ್ಮ ವಿಚಾರಗಳನ್ನು ಹೇಳುವಾಗ ಒಮ್ಮೆಯಲೆ ಧ್ವನಿಯು ಕುಗ್ಗಿತು. ಕಡಿದುಬಡಿದಾಯಿತು. ಮಹಾತ್ಮರ ಪ್ರಶಂಸೆ ಮಾಡುವಾಗ, ತಮ್ಮ ದಬ್ಬಾಳಿಕೆಯ ಮೇಲೆ ಹೆಚ್ಚು ಕನವಿಟ್ಟರು. ಮಹಾತ್ಮರ ಸ್ಮೃತಿ ನಡೆಯಲು, ಲಾರ್ಡ ಸಾಹೇಬರಿಂದ ವಿನಾಪಹೊಂದು ಹೊಸ ವಿಷಯ ಹೊರಡುವದೆಂದು ಸೆಂಬರರು ಅ ಪೇಕ್ಷಿಸಿದರು. ಕೆಲ್ಮ ದೃಷ್ಟಿಗಳಲ್ಲಿ ಕಾಂಗ್ರೆಸ ವನ್ನು ಸೇರಿಸಿಕೊಳ್ಳುವರೆಂದೂ ಭಾವಿಸಿದರು. ಆ ದರೆ ಅದು ಬೇರೆಯಂದು ಹಾದೀ ಹಿಡಿಯಿತ್ತು.

ಸಾಹೇಬರ ಭಾಷಣ ಮುಗಿದ ಕೂಡಲೆ, ಮೆಂಬರರು ಬೇರೆ ಬೇರೆ ತರದ ಅಭಿಪ್ರಾಯಗಳನ್ನು ಪ್ರಕಟಮಾಡಿದರು.

ಪೆದ್ದು- ಮಹಮದ ಯಾಕೂಬಹುಶೇರೆ- ದೇಶದಲ್ಲಿ ಅರಾಜಕತೆಯುಂಟಾಗಲಿಕ್ಕೆ ಮುದ್ರಾಲಯಗಳು ಕಾರಣವಲ್ಲ. ಮುದ್ರಾ ಲಯಗಳನ್ನು ಹಿಂಸಿಸುವದನ್ನು ಬಿಡಬೇಕೆಂದೂ ಕಾಂ ಗ್ರೆಸಿನವರು ಹೊಸ ರಾಜ್ಯಘಟನೆಯನ್ನು ಯಶಸ್ವಿ ಮಾಡಬೇಕೆಂದು ಲಾರ್ಡ ಸಾಹೇಬರು ಮಾಡಿಕೊಂ ಡ ವಿನಂತಿಯನ್ನು ಆದರಿಸುವರೆಂದೂ ಆಶಿಸುತ್ತೇನೆ.

ಕೆ. ಸಿ. ರಾಯ.. ಸರಕಾರದ ಮುಖ್ಯ ಕೆಲ ಸವು ಮುದ್ರಾಲಯಗಳನ್ನು ಸಮಾಧಾನಪಡಿಸುವ ದಾಗಿತ್ತದೆ. ಇವರೆ ಸರಕಾರವು ಹಾಗೆ ಮಾಡ ಬಯಿಸುವದಿಲ್ಲ.

ಸರ ಹರಿಸಿಂಗ ಗಾರ್- ಹಿಂದುಸ್ಥಾನದ ಹಿತ ವಾಗಬೇಕೆಂದು ಒಯಿಸುಪಂಥ ಒಬ್ಬ ಪ್ರಾಮಾಣಿಕ ಮತದ ಸ್ನೇಹಿಕನ ಭಾಷಣವಾಗಿರುತ್ತದೆ.

ಸಣ್ಮಖಶೆಟ್ಟಿ- ಮುದ್ರಾಲಯಗಳು ರಾಜ ಕಾರಣದಲ್ಲಿ ವತೀಲ ರಾಯಭಾರಿಯಂಥ ಮಹತ್ವ ದ ಸಂಸ್ಥೆಗಳಾಗಿದ್ದು, ಲಾರ್ಡ ಸಾಹೇಬರು ಇವುಗ ಳನ್ನು ಸಮಾಧಾನಪಡಿಸಬೇಕಾಗಿತ್ತು.

ಇದಲ್ಲದೆ ಇನ್ನು ಹೆಸರು ಒಂದಾಗಿ ಸ್ತುತಿಗ ಳೂ ನಡೆದವು. ಸರ ರಹಿಮತುಲ್ಲಾ ಸಾಹೇಬರು ಅ ಧ್ಯಕ್ಷರಾದ ಬಗ್ಗೆ ಮೊದಲು ಸಂತೋಷವನ್ನು ವ್ಯ ಕ್ತಪಡಿಸಿದವರು ಸರಕಾರೀ ಮೆಂಬರರು. ಲಾರ್ಡ ವೆಲಿಂಗಡನ್ನರ ಸಾಹೇಬರ ಹೆಸರು ಬಂದ ಕೂಡಲೆ- ದಿವಾನಬಹಾದ್ದೂರ ರಾಗಾಚಾರ್ಯರು ಜವ್ವಾಳಿ ಹೊಡೆದು ಸಂತೋಷ ತೋರಿಸಿದರು ದಬ್ಬಾಳಿಕೆ ಯಲ್ಲಿ ದಂಡು ಮತ್ತು ಪೋಲಿಸು ಮಾಡಿದ ಬಹಾ ದ್ದಾರಿಯ ಪ್ರಶಂಸೆ ಮಾಡುವ ಕಾಲಕ್ಕೆ ಸರ ಶ್ರೀರಾ ಮಸಾಹೇಬರು ಅನಂದವನ್ನು ವ್ಯಕ್ತಪಡಿಸಿದರು.

ಕೊನೆಗೆ ಲಾರ್ಡ ಆಯವಿರ್ನರು ಮಹಾತ್ಮರನ್ನು ಹೊಗಳಿದರು.

(೨)

ಸಾಹೇಬರು ಅಸೆಂಬ್ಲಿಯಲ್ಲಿ ಮಾಡಿದ ಭಾ ಷಣದ ವಿಸ್ತೃತ ಸ್ಮೃತಿಯು ಮುಂದೆ ಕೊಟ್ಟಂತಿರು ತ್ತದೆ.

ಗಾಂಧಿಯವರಿಂದ ತೋಚಬೇಯನ್ನೆನಿಸು ವಂಥ ಎಷ್ಟೇ ತಪ್ಪುಗಳಾದವೆಂದು ಅನೇಕರು ಮತವಾಗಿದ್ದರೂ, ಹಿಂದು ಭೂಮಿಯ ಮೇಲೆ ಅವರ ಅತ್ಯಂತ ಪ್ರೇ ಮವಿದ್ದು, ಮತ್ತು ಈ ಹಿಂದಭೂಮಿಯ ಬೆನೆಯಿಂದ ಬೇಕಾದಂಥ ಸ್ವಾರ್ಥತ್ಯಾಗ ಮಾಡಬೇಕಾದರೂ ಅ ಡ್ಡಿಯಿಲ್ಲೆಂಬ ಭಾವನೆಯು ಅಧ್ಯಾತ್ಮಿಕ ಸಾಧರ್ಮ ದಿಂದಲೇ ಆವಂಲ್ಲುಂಟಾಗಿರುತ್ತದೆಂಬದನ್ನು ಅಲ್ಲಗೆ ಳೆಯಲಿಕ್ಕೆ ಬರುವದಿಲ್ಲ. ತಮ್ಮ ತಿಂದು, ಭಿನ್ನ ಮ ತದವರು ತಪ್ಪೆನಿಸುವಂಥ ತತ್ವಜ್ಞಾನಕ್ಕೆ ಆಶ್ರಿತ ರಾಗಿದ್ದಾರೆಂದು ಮಿ. ಗಾಂಧಿ ಎನಿಸಿಕೊಳ್ಳುವರೂ ಹಿಂದೂ ರಾಜ್ಯದ ಸೂತ್ರಧಾರಿಗಳಿಂದಂಥ ಇಂಗ್ಲಿಷ ಜನರು ಹಿಂದುಸ್ಥಾನದ ಶೇವೆ ಮಾಡಲು ತಕ್ಕನ್ಮು ದೃಷ್ಟಿಯಿಂದ ಅಂಗೀಕರಣಪೂರ್ವಕವಾಗಿ ಸಿದ್ಧರಿ ವ್ಯರೆಂಬದನ್ನೂ ಅಲ್ಲಗಳೆಯುಲಿಕ್ಕೆ ಬಾರುವದಿಲ್ಲ. ಈ ಪ್ರಕಾರ ಧ್ಯೇಯದ ಏಕವಾಕ್ಯತೆಯಿದ್ದಾಗ, ಅ ನೇಕರು ಈ ಧ್ಯೇಯ ಪೂರ್ಣತೆಯಲ್ಲಿ ವಿಘ್ನ ತರಬೇ ಕೆಂದು ಮಾಡುತ್ತಿರುವದು ಕಾಲದ ವಿಪರ್ಯಾಸವೆ ಸರಿ ಈ ಕಾರ್ಯಕರ್ತತ್ವವು ರಾಷ್ಟ್ರಹಿತೋದ್ದೇ ಗಿ, ಬೇಗನೆ ಜನಾಲ್ಪಾದಕರವಾದ ಸಂಗತಿಯಾಗಲೆಂದು ಹಾರೈಸುತ್ತೇವೆ.

———

ಶ್ರೀ ಸಭಾಷಚಂದ್ರ ಬೋಸರಿಗೆ ಶಿಕ್ಷೆ.

—೦*೦—

ಶ್ರೀ ಸುಭಾಷಚಂದ್ರ ಬೋಸರ ಹೆಸರು ಕ್ಷ ಚಿತವಾಗಿ ಕೇಳಿಬರುತ್ತಿತ್ತು. ಕಲಕತ್ತೆಯ ಮೇ ಯರ ಕೆಲಸದಲ್ಲಿಯೂ, ಬಂಗಾಲ್ಯಾದಲ್ಲಿಯೂ ಬಹು ವಾಗಿ ತೊಡಗಿದ್ದಾರೆ. ಹೋದ ಶನಿವಾರ ದಿವಸ ಯಾವ ಕೆಲಸಕ್ಕಾಗಿಯೆ ೀ ಮಾಲ್ದಾಪಟ್ಟಣಕ್ಕೆ ಹೋ ದರು. ಜಿಲ್ಲೆಯಲ್ಲಿಯೇ ಬರಬಾದೆಯಿದು ಇವ ರ ಮೇಲೆ ನೋಟೀಸು ಕೆ ದರು. ಹುಷಾರನ್ನು ಕೆವೊನ್ನೆ ಮಾಡಲುಹಿಡಿದು, ಮ್ಯಾ ಸ್ಟೇಟರ ಮುಂ ದೆ ನಿಲ್ಲಿಸಿದರು. ಎನೆತೆಗೆದು ಎನೆ ಮಾಜ್ಞವಪಡೆರೊ ಳಗಾಗಿ ಮ್ಯಾಜಿಸ್ಟ್ರೇಟರು ತಮಗೆ ಜಾಮೀನಾರ ದ ಸವದಾ ಶಿಕ್ಷೆ ಕೊಟ್ಟರು. ಕೂಡಲೆ ಪೋಲಿ ಸರು ಇವರನ್ನು ರಾಜಶಾಹಿಯ ಕಾರ್ಯಾಗಕ್ಕೆ ಸಾಗಿ ಸಿದರು.

ರಾಜಕೀಯ ಕೈದಿಗಳನ್ನು ಒಂಧವುಕ್ತ ಮಾಡಬೇಕೆಂಬ ಶರಾವು.

—೫(**)೫—

ನಾಗಪೂರ ಇಶಾಪೆಯಲ್ಲಿ ಈ ಪರ್ಯಂತರ ಬಿಸುಗಡೆ ಹೊಂದಿದವನ್ನು ಹೊಕ್ಕು ಪಡಿಸಿ, ಸದ್ಯ ಕಾರಂಗವಲ್ಲಿ ಇರಿಸಿರುವ ಜನ ರಾಜಕೀಯ ಕೈದಿಗಳಿದ್ದಾರೆ. ಇವನ್ನು ಬಂಧವುಕ್ತ ಮಾಡುವದಲ್ಲದೆ, ದಂಡ ವಸೂಲು ಮಾಡದೆ ಉಳಿದಂಥವರ ದಂಡವನ್ನು ಈ ನಂತರ ಜಸ್ತಿ ಮೊದಲಾದ ಕೃತ್ಯಗಳಿಂದ ವಸೂಲುಮಾಡಬಾರದೆಂಬ ಶರಾವು ಒಂತು. ಹೀಗೆ ಮೊಂಬರರಾದ ತ್ರೀ ರಾಘವೇಂದ್ರರಾಯರು ಪುನಃ ವಿಕ್ರಮರಾಯನಂತೇ ನಟಿಸಿದರು. ನಾವು ಬಿಸುವೆವು. ಆದರೆ ಅವರು ಈ ನಂತರ ಜಿಲ್ಲವಳಿಯಲ್ಲಿ ಸೇರಲಕ್ಕೆಲ್ಲೆಂದು ವಚನ ಕೊಡಬೇಕೆಂದರು. ಹಿಂದೆ ಇಂಥ ಉತ್ತರಗಳು ಎಷ್ಟೋ ಸಾರಿ ಆಗಿವೆ. ಯಾವನೂ ಕರಾರ ಬರಕೊಡಲಿಲ್ಲ. ವಚನ ಕೊಡಲಿಲ್ಲ. ಆದೇ ಹಾಡು ಈಗ ಪಹ ಲಗುವದುಂಟು ನಿಮ್ಮ ಉತ್ತರವು ತೀರ ನಿರಾಶಜನಕವಾಗಿರುತ್ತದೆಂದು ಮೊಂಬರರು ಅವರಿಗೆ ಕೂಡಲೆ ಹೇಳಿದರು. ನೀವು ಬಿಟ್ಟು, ಬೇರೆ ಇ ಲಾಪೆಯವರಿಗೆ ಉದಾಹರಣೆ ಹಾಕಿಕೊಡಿರೆಂದು ಮೊಂಬರರು ಇವರಿಗೆ ಹೇಳಿದ ಮಾತು ವ್ಯರ್ಥವಾಯಿತು. ಶರಾವನ್ನು ಹೋಟೆಗೆ ಹಾಕಲು ಅದು ಬಹುಮತದಿಂದ ಪಾಸಾಯಿತು. ಮುಂದೇನು?

ಮುಂಬಯಿಯಲ್ಲಿ ಮುನಲಮಾನರ ಶಾದಾ ಬಿಲ್ಲಿನ ನಿಷೇಧ.

—(‡)‡‡(‡)—

ಬಿಚ್ಚಗತ್ತಿಯ ಮೆರವಣಿಗೆ.

—(೦)—

ಮುನಲಮಾನರು ತಾಂದಾನವರ ಸ್ವಾಧಿವಾಹದ ಬಿಲ್ಲನ್ನು ಹೆಚ್ಚಾಗಿ ನಿಷೇಧಿಸುವಂಥವರಾಗಿದ್ದಾರೆ. ದಿಲ್ಲಿಯ ಜುಮ್ಮಾಮಸೀದಿಯಲ್ಲಿ ಶುಕ್ರವಾರ ದಿವಸದ ನಿಮಾಜಾದ ಬಳಿಕ, ಬೇಕೆಂದು ಅಲ್ಪಪಕ್ಷಿಗಳ ಮದಿವೆ ಮಾಡಿದರು. ಆ ನಂತರ ಉತ್ತರ ಹಿಂದುಸ್ಥಾನದಲ್ಲಿ ಈ ಕಾಯದೆಭಂಗ ಮಾಡಿದ ಮದಿವೆಗಳಾಗುತ್ತಿರುವವು. ಮುಂಬಯಿಯಲ್ಲಿ ಕಾಂಗ್ರೆಸದಹಾ ನೊಡ್ಡ ದೊಡ್ಡ ಮೆರವಣಿಗೆಗಳು ಹೊರಡುತ್ತಿರುವಂತೆ, ಇವರೂ ಮೊನ್ನಿನ ದಿವಸ ಪ್ರಚಂಡ ಮೆರವಣಿಗೆ ತೆಗೆದು, ಈ ಬಿಲ್ಲನ್ನು ನಿಷೇಧಿಸಿದ್ದಲ್ಲದೆ, ಇದನ್ನು ಅವಲಿನಲ್ಲಿ ತಂದರೆ-ಮುನಲ್ಮಾನರು ಅಹಿಂಸೆಯ ಅನಕ್ಯಾಚಾರಿಗಳಾಗಿ ಉಳಿಯುವದು ಶಕ್ಯವಿಲ್ಲೆಂದು ದಾರಿಗುಂಟ ಸಾರಿ ಸಾರಿ ಹೇಳುತ್ತಿದ್ದರು. ಮತ್ತು ಪ್ರತ್ಯಕ್ಷ ಕಾಯದೆಭಂಗ ಮಾಡುವ ದ್ಯೋತಕವಾಗಿ, ನಾಲ್ಕು ವರ್ಷದ ಇಬ್ಬರು ಹುಡುಗರ ಕಯ್ಯಲ್ಲಿ ಬಿಚ್ಚುಗತ್ತಿಯನ್ನು ಕೊಟ್ಟು, ಮೆರವಣಿಗೆಯು ಮುಂದೆ ನಡಿಸುತ್ತಿದ್ದರು.

ವರ್ತಮಾನ ಪತ್ರಗಳ ಕಾಯದೆ ರದ್ದು ಮಾಡಿಸುವ ಪ್ರಯತ್ನ.

ಲಾರ್ಡ ಲಿಟನ್ನಸಾಹೇಬರ ಕಾಲಕೀರ್ತಿಯಲ್ಲಿ ವರ್ತಮಾನಪತ್ರಗಳ ಮೇಲಿನ ಗದೆಯು ಸುಮಾರು ವರ್ಷವಿರಬೇಕೆಂಬ ಕಾಯದೆಯು ಈ ನಾಲ್ಕು ದಿವಸಗಳಲ್ಲಿ ಪಾಸಾಗಿ ಹೋಗಬೇಕಾಗಿರುತ್ತದೆ ಕೆಲವರು ಈ ಬಿಲ್ಲುಗಳನ್ನು ಕೆಲವು ದಿವಸ ಮುಂದೆ ಹಾಕಬೇಕೆಂದು ಲಾರ್ಡಸಾಹೇಬರಿಗೆ ಸೂಚಿಸುವಂತೆಯೂ, ಇದನ್ನು ಪೂರಾ ರದ್ದೇ ಮಾಡಬೇಕೆಂತಲೂ ಕೆಲವರು ಅಭಿಪ್ರಾಯಪಟ್ಟಿರುತ್ತಾರೆ. ವರ್ತಮಾನಪತ್ರಗಳ ಬಾಯಿಗೆ ಬೀಗ ಹಾಕುವದರಿಂದ ಯಾವ ಪ್ರಯೋಜನ ಪುರುಷಾರ್ಥಪ್ರಾಪ್ತಿಯಾಗಲಾರದೆಂಬದು ಹತ್ತು ವರ್ಷಗಳಹಿಂದೆ ಮತ್ತು ಕಳೆದ ಒಂಬತ್ತು ತಿಂಗಳಲ್ಲಿ ಕಂಡು ಹೋಗಿದೆ. ಒಬ್ಬಾಳಿಕೆಯು ಕೇವಲ ಹುಡುಗಾಟಿಕೆಯದಾಗಿರುತ್ತದೆ. ಏನಲ ಕೋಡಿನಲ್ಲಿ ಅಪರಾಧ ಮಾಡಿದವರಿಗೆ ಶಿಕ್ಷೆಯುಂಟು. ಮುದ್ರಾಲಯ ಮತ್ತು ವರ್ತಮಾನಪತ್ರಗಳ ವಿಷಯದಲ್ಲಿ ಅಪರಾಧ ಮಾಡುವನೆಂದು ಗ್ರಹಿಸಿ, ಶಿಕ್ಷಿಸುವರು. ಎಡಿಟರಾದವರಿಗೆ ಬಡಿಯಾದರೆ ಸಾಕು. ತಾರಣದ ಹಣ ಕಟ್ಟಬೇಕು. ಸ್ಥಳಕಾಂಕದವಾಗಲಿಕ್ಕೆ ಜಾಮೀನು ಕೊಡಬೇಕು. ಜುಲುಮೆ ಒಲಾತ್ಕಾರಗಳೇ ಸೈ

ಹತ್ತು ವರ್ಷಗಳ ಹಿಂದೆ ಹೊಸ ರಾಜ್ಯಘಟನೆ ಮಾಡುವಾಗ ದಬ್ಬಾಳಿಕೆಯು ಒಹುತೇಕ ಕಾಯದೆಗಳನ್ನು ರದ್ದು ಮಾಡಿದರು. ವರ್ತಮಾನಪತ್ರ-ಮುದ್ರಾಲಯಗಳ ಜಾಮೀನದ ಕಾಯದೆಯೂ ಆ ದರ ಕೂಡ ಗೋರಿ ಕಂಡಿತು. ಕಾಂಗ್ರೆಸ್‌ವರು ಹೊಸ ರಾಜ್ಯಘಟನೆಯಲ್ಲಿ ಸಹಕಾರ ಮಾಡಬೇಕೆಂದು ಹಾರೈಸುವಾಗ, ಕಾಂಗ್ರೆಸದ ಮುಖವಾಗಿರುವಂಥ ವರ್ತಮಾನಪತ್ರಗಳ ಬಾಯಿಗೆ ಕಲ್ಲೀ ಹಾಕಬೇಕೆಂದು ಅವಸರಪಡುವದು ಹಾಸ್ಯಾಸ್ಪದವೇ ಸರಿ.

ಎರಡು ಲಕ್ಷ ಇಂಗ್ಲೀಜ ಕೂಲಿಕಾರರ ಸಂಪು.

—(೦)(೦)(೦)—

ಲ್ಯಾಂಕಶಾಯರದಲ್ಲಿರುವ ಗಿರಣಿಗಳಲ್ಲಿ ದುಡಿಯುವ ಎರಡು ಲಕ್ಷ ಕೂಲಿಕಾರರು ಸಂಪು ಮಾಡಿ ತಿಲಸ ಬಿಟ್ಟಿದ್ದು, ಸಂಸಿನಿಂದ ಎಳು ಲಕ್ಷ ಮಗ್ಗಗಳು ಬಂದು ಬಿದ್ದಿವೆ

ಹಿಂದುಸ್ಥಾನದಲ್ಲಿ ಯುರೋಪಿಯನ್ನರಿಗೆ ಎರಡು ಸನದುಗಳು.

—(೦)—

ಹಿಂದುಸ್ಥಾನದ ಭಾವೀ ರಾಜ್ಯಘಟನೆಯಲ್ಲಿ ನಡೆಯುವ ವ್ಯಾಪಾರದಲ್ಲಿ ಹಿಂದೂ ಮತ್ತು ಯುರೋಪಿಯನ್ನರೆಂಬ ಭೇದವಾಗಲಾರದು; ಉಭಯತರಿಗೂ ಸರಿಯಾದ ನಿಸ್ಪೃಷ್ಟಪಾತದ ಹಕ್ಕುಗಳಿರುವೆವೆಂದು ರಾವುಂಡ ಟೇಲರ ಮೊಂಬರರು ಯುರೋಪಿಯನ್ನರಿಗೆ ಆಶ್ವಾಸನ ಕೊಟ್ಟಿದ್ದಾರೆ. ಇದೇ ಪ್ರಕಾರ ಹಿಂದ ಸ್ಥಾನದಲ್ಲಿ ಯುರೋಪಿಯನ್ನರು ಮಾಡುವಂಥ ಘೌಜದಾರಿ ಅವರ ಧಗಳ ವಿಚಾರಣೆಯಲ್ಲಿ ಅವರಿಗೆ ಆಗಿರುವಂಥ ಹಕ್ಕುಗಳನ್ನು ಕೊಟ್ಟರು. ಹೀಗೆ ಯುರೋಪಿಯನ್ನರು ಸ್ವರಾಜ್ಯಘಟನೆಯಲ್ಲಿ ಹಿಂದುಸ್ಥಾನದಿಂದ ಎರಡು ಸನದುಗಳನ್ನು ಪಡೆದರು.

ಯುನಿಯನ್ನ ಜಾಕಿನ ಕಳವು

—(೦)—

ಬೆಳಗಾವಿಯ ಹತ್ತಿರಿರುವ ಅನಗೋಳದಲ್ಲಿ ಜಮಖಂಡಿ ಸಂಸ್ಥಾನಿಕರ ಬಂಗ್ಲೆಯುಂಟು ಅಲ್ಲಿ ಕೊಲ್ಹಾಪೂರ ದ ಪೋಲಿಟೆಕಲ ಏಜಂಟಸಾಹೇಬರು ಇಳಕಲ್ಲಿಂಡಿದ್ದಾರೆ. ಸಾಹೇಬರ ಆಗಮನ ಸೂಚನವಾಗಿ ಅದರ ಮೇಲೆ ಇಂಗ್ಲೀಜಿ ಯುನಿಯನ್ನ ಜಾಕ ಹಚ್ಚಿದ್ದರು. ಈ ನಿಶಾನೆಯನ್ನೇ ಯಾರೋ ವಟವಾಡು ಮಾಡಿದ್ದಾರೆ

ಸುಂದಿದ ಬೀದಿಯಲ್ಲಿ ಸುಖಿನ್ನಗನ್ನಿಂದ ಕೊಲ್ಲುವ ಪ್ರಯತ್ನ.

—(೦)—

ಚಿಕಾಗೋ ಪಟ್ಟಣದಲ್ಲಿ ಕೆಲ ಜನರು ಮೋಟಾರಿನಲ್ಲಿ ಕೂತು ನಡೆದಿಟ್ಟಿನಲ್ಲಿ ಬಂದರು. ತಮಗಾಗಲಾದದವರನ್ನು ಕೊಲ್ಲುವದೇ ಅವರ ಉದ್ದೇಶವಾಗಿತ್ತು. ಆತನು ಸಿಕ್ಕನು. ಕೂಡಲೆ ಮಶಿನಗನ್ನಿನಿಂದ ಅವರು ಹುಡಿದಂತೆ ಗುಂಡು ಸುರಿಸಿದರು. ಜನರು ದಿಸೆದೆಸೆಗೆಡಿಗಳಾಗಿ, ದಿಕ್ಕುತಪ್ಪಿದರು. ಕೊಲೆಗೆ ನಿಮಿತ್ಯನಾದವನು ಒಂದು ಮೋಟಾರಗ್ಯಾರೇಜರಲ್ಲಿ ಹೊಕ್ಕು ಅದರ ಎಂಜನೆಯ ದಾರಿಯಿಂದ ಹೊರಬಿದ್ದು ಪಾರಾದನು. ಕೊಲೆಗಡಕರು ಮೋಟಾರಕ್ಕೆ ಪೂರ್ತಿ ವೇಗ ಕೊಟ್ಟು, ಹಿಂದಿನಿಂದ ಅವರು ಹುಡಿದಂತೆ ಗುಂಡು ಹಾರಿಸುತ್ತ, ಪುಸಿ ದಾರೀ ಬಿದ್ದು, ಅದೃಶ್ಯರಾದರು.

ನೋಟೀಸ

ಬಸಿ ಕೋಮು ಸಂಗಪ್ಪ ಹಾವೇರಿ ಸಾಕೀನ ಹಂದಿಗನೂರ ತಾಲ್ಲು ಹಾವೇರಿ ಈಕಿಗೆ-

ಕೆಳಗೆ ಸಹಿ ಮಾಡಿದ ಸಂಗಪ್ಪ ಮಲ್ಲಪ್ಪ ಹಾವೇರಿ ಸಾಕೀನ ಕೂಡ್ಲ ತಾಲ್ಲು ಹಾನಗಲ್ಲ ಈ ತನು ನಿನಗೆ ಈ ನೋಟೀಸಿನೀದ ತಿಳಿಸುವದೇನಂದರೆ-

ನೀನು ನನ್ನ ಅಡಕಿ ಎರಡನೇ ಹೆಂಡತಿ ಇದ್ದು ನೀನು ಅಜಮಾಸ ೮-೯ ತಿಂಗಳ ಕೆಳಗೆ ಜಾತ್ರೆಯ ದಶಿಂದ ನಮ್ಮ ಕಾಯಿ ಕರೆಯಲಿಕ್ಕೆ ಬಂದಾಗ್ಯೆ ನಿನ್ನನ್ನು ನನ್ನ ಸಮ್ಮತಿಯಿಂದ ಕಳಸಿಕೊಟ್ಟೆ ನೀನು ಹೋಗುವಾಗ್ಯೆ ನನ್ನ ಮಾಲ್ಕಿ ದಾಗೀನೆಗಳು ಅಂದ್ರೆ-

೧ ಜತಿ ಭಂಗಾರದ ಬಳಿ ೬ ತೊಲಿ
೧ ಸಂಗಿ ಭಂಗಾರದ್ದು ೮ ತೊಲಿ
೧ ಜತಿ ತೋಡೆ ಭಂಗಾರದ್ದು ೪ ತೊಲಿ
೧ ಜತಿ ತೋಳಬಂದಿ ಬೆಳ್ಳಿವು ೭೪ ತೊಲಿ
೧ ಪಟ್ಟಿ ಕಿಮ್ಮತ್ತು ೧೬ ರೂಪಾಯಿ
೧ ಜೌಕಾ ಕಿಮ್ಮತ್ತು ೧೨ ರೂಪಾಯಿ
೧ ಕಾರ್ಯದ ಕೀರಿ ಕಿಮ್ಮತ್ತು ೨೨ ರೂಪಾಯಿ
೧ ಕರ್ನಪೂಲು ಕಿಮ್ಮತ್ತು ೮ ನತ್ತು ಕಿಮ್ಮತ್ತು ೨೦ ರೂಪಾಯದ್ದು
೧ ಗುಂಡಿನ ಟೀಕಿ ಕಿಮ್ಮತ್ತು ೬೦ ರೂಪಾಯದ್ದು

ಇಷ್ಟು ತಕ್ಕೊಂಡು ಹೋದಿ ನಾನು ನಿನ್ನನ್ನು ವಳಗಡೆ ಸ್ವಃ ಕರೆಯಲಿಕ್ಕೆ ಇದಾಗ್ಗೆ ನಿನ್ನ ಮೈನೇಲೆ ದಾಗೀನೆ ಇದ್ದಿಲ್ಲಾ ನೀನು ಕರೆದರೆ ನಮ್ಮ ಕಾಯಿಗೆ ಜಡ್ಡು ಅಗಿದೆ ಸೆಟ್ಟಗಾದ ಮೇಲೆ ಬರುತ್ತೀನಿ ಅಂತಾ ಹೇಳಿದಿ ಆವರಿಗೂ ಬರಲಿಲ್ಲ ಕಾರಣ ಈ ನೋಟೀಸು ಕೊಡಬೇಕಾಯಿತು ನೀನು ಈ ನೋಟೀಸು ಮುಟ್ಟಿದ ಎಂಟು ದಿವಸದಲ್ಲಿ ನನ್ನ ಮೇಲ್ಕಾಣಿಸಿದ ಯಾವತ್ತು ದಾಗೀನೆ ತಕ್ಕೊಂಡು ಬಂದು ಸಂಸಾರ ಪ್ರಪಂಚ ಮಾಡಿಕೊಂಡಿರಬೇಕು ಇದಕ್ಕೆ ತಪ್ಪಿದರೆ ಈ ನೋಟೀಸು ನೋಡಚೀಟಿಯಂತಾ ತಿಳಿಯತಕ್ಕದ್ದು ಮತ್ತು ನನ್ನ ದಾಗೀನೆಗಳ ದಶಿಯಿಂದ ನಿನ್ನ ಮೇಲೆ ಮತ್ತು ನಿನ್ನ ತಾಯಿಯ ಮೇಲೆ ಕಾಯಿದೆತೀರ ಇರಾಜ ಮಾಡುವೆನು

ಆ ಬಾಬತು ಹಕ್ಕುವ ಖರ್ಚು ನಿನ್ನ ತಲಿಯ ಮೇಲೆ ಆದೆ ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲುಂಟು ತಿಳಿಯೋದು

ತಾರೀಖು ೧೬-೧೧-೧೯೩೧ನೇ ಇಸ್ವಿ

ಸಹಿ- ಸಂಗಪ್ಪ ತಂದಿ ಮಲ್ಲಪ್ಪ ಹಾವೇರಿ

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮೂಲಮಠ
ಮತ್ತು ——————— ಧಾರವಾಡ
ಕಾಮನಕಟ್ಟೆ

ನಮ್ಮಲ್ಲಿಇಡಿ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಚಿತ್ರಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವರು ಳಳಗೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯತಿಯುಂಟು. ಮಾದರಿಗಾಗಿ ಕೆಲವು ಹೆಸರು ಕೆಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮಾಜ್ಯ ಸ. ೧,೨. ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ	೧- ೬-೦
೩. ಛತ್ರಪತಿ ಸಿವಾಜಿ ಮಹಾರಾಜ	೨-೨-೦
೪. ಕರ್ನಾಟಕ ಸಿಂಹಾಸನ ಸಾಪನೆ	೧ ೦ ೦
೫. ಚರಿತ್ರ ಸಂಗ್ರಹ ಭಾ. ೧.	೪-೦-೦
೬. ಅಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೧೪-೮-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾಂಸಿ	೨- ೦-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೧೬-೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧- ೮-೦
೧೦. ಲ್ಯಾಂಡ ರೆವ್ಹಿನ್ಯೂ ಕೋಡು	೨-೧೧-೦
೧೧. ಗ್ರಾಮ್ಯನಮೂನೆ ಬೆಕ್ಕದ ಪುಸ್ತಕ	೨-೧೩-೦
೧೨. ನೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೦-೧೦-೦
೧೩. ಇನೂಪನೀತ ಕಥೆ ಭಾ. ೧, ೨,	೨- ೪-೦
೧೪. ಕಾರ್ತನ ಕಂಠಾಭರಣ	೧-೧೦-೦

ಶ್ರೀಪಾದ ರಾಮಚಂದ್ರ ಬೇತಪಾಂಡೆ ಬಿ. ಎಸ್. ಸಿ.

ಹೊಲಿಗೆ ಕಲಿಸುವ

ವತ್ನದಂಥ ಪುಸ್ತಕ.

—(೦)—

ಜೆಂ ಸಿಸ್ಟೀನು ಆಫ ಕಟೆಂಗವೆಂಬ ಅಮೂಲ್ಯವಾದ ಚಿಕ್ಕ ಪುಸ್ತಕವು ಈಗ ತಾನೆ ಮುದ್ರಣ ಹೊಂದಿ, ಮಾರಾಟಕ್ಕೆ ಸಿದ್ಧವಾಗಿದ. ಗಂಡಸರು, ಹೆಂಗಸರು ಹುಡುಗರು ಇವರಿಗೆ ಸರಿಯಾಗಿ, ಅಜ್ಜಿ ಕಟ್ಟಾಗಿ ಎಷ್ಟು ಒಟ್ಟೆ ಬೇಕಾಗುತ್ತದೆಂಬದನ್ನು ಸಶಾಸ್ತ್ರವಾಗಿ ಇದರಲ್ಲಿ ಬರೆದಿರುತ್ತದೆ. ಮತ್ತು ಎಲ್ಲರಿಗೂ ದೇಹರಚ್ಚಣೆಯು ವಿಚಾರವಾಗಿ ಉಡತೊಡಿಗೆ ಮತ್ತು ರಚ್ಚಣೆ ಎಂಬ ಭಾಗವು ಈ ಪುಸ್ತಕದಲ್ಲಿ ಸೇರಿಸಲ್ಪಟ್ಟಿದೆ. ಬೆಲೆ ಮೂರು ರೂಪಾಯಿ, ಅಂಚೆ ಹಾಸಿಲು ಹೆಚ್ಚಿಗೆ ವದಾಣಿ. ಪ್ರತಿಯೊಂದು ಕುಟುಂಬದವರೂ ಈ ಪುಸ್ತಕದಲ್ಲಿ ಸಂಗ್ರಹದಲ್ಲಿಟ್ಟು ಕೊಳ್ಳಬೇಕು. ಅಂದರೆ ಸಿಂಪಿಗರು ಹೇಳಿದಂತೆ ಹೆಚ್ಚಿಗೆ ಬಟ್ಟೆ ಕೊಟ್ಟು, ಹಣ ಳಳಕೊಳ್ಳುವದು ನಿಃಸಂದೇಹವಾಗಿ ತಪ್ಪುವದು.

ವಿಳಾಸ— ರಾವ್ಸ ಟೀಲರಿಂಗ ಶಾಲೇಜ.
೧೪೩ ಸ್ಪಿನ್ಸೆಸಸ್ಟ್ರೀಟ ಮುಂಬಯಿ (೨)

ಧಾರವಾಡದಲ್ಲಿ

ಅಂಗಡಿ ಮತ್ತು ಬಂಗಲೆಯ ಮಾರಾಟ

—)(—(೮)—)(—

ಮು. ನಂ. ೧೫೭೭ ದುಮ್ಮಜ್ಜಿನ ಅಂಚೆಪಟಿ ಮಂಗಳವಾರಪೇಟ ಜವಳಿ ಓಣಿಯಲ್ಲಿ ಇರೋದು ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇಕೋದು.

ಮು. ನಂ. ೭೫೧೧ ಕೆಲ್ಲೆದಲ್ಲಿ ಶ್ರೀ. ಹೇಬಳೆ ಳಳ ಇವರ ಬಂಗ್ಲೇದ ಎದುರಿನಲ್ಲಿ ಮಿ. ಫೆರ್ನಾಂಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಳಳ್ಳತಕ್ಕ ಬೆಲೆ ಮತ್ತು ಬೇರೆ ಮಾಹಿತಿಯನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಳು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಳಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R N B 1413

ನಿತ್ಯ ಪತ್ರಿ

ವಿಜಯ

ಬೆಲೆಅರ್ಧಆಣೆ

ಸಂಪಾದಕರು:- ಅಣ್ಣಾ ಭಾಯ ಚಾಕಾಜಾಯ್ ಹೊಸಕೇರಿ.

ವರ್ಷ ೧೨ ಧಾರವಾಡ ಗುರುವಾರ ತಾರೀಖು ೨೨ನೇ ಜನೇವರಿ ೧೯೩೧ (ಸಂಚಿಕೆ ೧೭

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧಮಾಡಿರುತ್ತೇವೆ. ಇದರಲ್ಲಿ ವಾದೀ ಶ್ರೀ ಶಿದ್ಧಾವದೂತರಿ ಅಸಲರ್ದಿ, ಶ್ರೀ ಅಂಧಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸದಾಶಿವ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕಳ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ಕೆಗೆಸಿದೆ. ದಾವೆಯ ಮಹತ್ವದ ದೃಷ್ಟಿಯಿಂದ ಇಷ್ಟ ಪ್ರತಿಗಳು ತೀರ ಖುಸವೆನಿಸುವವು. ಆದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಹ್ಯೂ. ಪಿ. ಖರ್ಚು ಬೇರೆ ಒಂದರಡು ಪ್ರತಿಗಳನ್ನು ಬೇಡುವವರು ಪ್ರತಿಯೊಂದಕ್ಕೆ ಎರಡಾಣೆಯಂತೆ ಪೋಸ್ಟ ಸ್ಟ್ಯಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಹ್ಯೂ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೀಚರಿಂಗ ಮತ್ತು ಕಟಿಂಗ ಕಾಲೇಜಿ ಧಾರವಾಡ ಮಾರ್ಕೆಟ್.

ನಾವು ದೇಶಿ ಮತ್ತು ಇಂಗ್ಲೀಶ ಪದತಿಯಂತೆ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೀಚರಿಂಗ ಅಂದರೆ ಅರಿವೆ ಹೊಲೆಯುವ ಸಶಾಸ್ತ್ರಶಿಕ್ಷಣ ಕೊಡುತ್ತೇವೆ. ಹೆಣ್ಣು ಕಟಿಂಗ ಮುದತ ಎರಡು ತಿಂಗಳ ಮತ್ತು ಟೀಚರಿಂಗ ಮುದತೆ ಮೂರು ತಿಂಗಳ ಈ ಪ್ರಕಾರ ಐದು ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ ಫಕ್ತ ಕಟಿಂಗ ಐದು ಐವತ್ತೈದು ರೂಪಾಯಿ ಫೀ ಮತ್ತು ಟೀಚರಿಂಗ ೧೫ ಹದಿನೆದು ರೂಪಾಯಿ ಶಿಕ್ಷಣವನ್ನು ಕನ್ನಡ ಸುರಾತಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ವಿದ್ಯಾರ್ಥಿಯ ತನ್ನ ವರ್ಚಸ್ಸಿನ ಪ್ರಕಾರ ತಿಂಗಳಾ ತನಿಷ ಅರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷಮಾ ಅಥವಾ ಒಂದು ಆಣೆ ಪೋಸ್ಟ ತೀಕೀಟು ಕಳಸಬೇಕು.

ಆರ್. ಬಿ. ಮುಧೋಳಕರ
ಹೈಸ್ಕೂಲ್ಸ ಡಿಪ್ಲೋಮಿಸ್ಟ ಪ್ರಿನ್ಸಿಪಾಲ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಎಂಟು ಲಕ್ಷದ ಮೇಲುಂಟು. ಇಳಿ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ಮಾಡಲ್ಪಡುವದು. ಕಾಮೀಮ ಮತ್ತು ಬೇರೆ ತರದ ಡವಾಜಿಟಗಳಿಗೆ ಜನ್ಮಾಗಿ ಬಡಿ ಬೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದನ ರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ.
ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆ

೧೫ ತಿಂಗಳಿಗೆ	ರೂ. ೧೫-೮-೦
೬ ,,	೬-೦-೦
೩ ,,	೪-೪-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೫-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳರಿ.

ಮ್ಯಾ ವಿಜಯ ಧಾರವಾಡ

ನೋಟೀಸಿನದರಗಳು

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದೂ ನರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಎರಡು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ರೇಲ್ವೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಗ್ಲಿಷಿನಿಂದ ಅವಾರ್ಡಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಡಬಲ ಕಾಲಮಿನ ಪಳಿಗೆಗೆ ಇಮ್ಮಡಿ ಚಾರ್ಜ ಕಾಯ್ದೆ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ರಿಕೆ ಪತ್ರವ್ಯವಹಾರ ಮಾಡಬಹುದು:

ಮ್ಯಾನೇಜರ ವಿಜಯ ಧಾರವಾಡ.

ಮೆ॰ ಮ್ಯಾಕಡೋನಾಲ್ಡ್‌ಸಾಹೇಬರ ಸ್ವರಾಜ್ಯವು.

ರಾಜಕೀಯ ಕೈದಿಗಳಿಗೆ ಮಾಫಿ ಇಲ್ಲ.

ಸೋಮವಾರ ೧೯ ನೆಯ ತಾರೀಖಿನ ದಿವ ಮೆ. ಮ್ಯಾಕಡೋನಾಲ್ಡ್‌ಸಾಹೇಬರು ಲಂಡನದಲ್ಲಿ ಹಿಂದುಸ್ಥಾನದ ಭಾವೀ ಸ್ವರಾಜ್ಯ ವಿಷಯವಾಗಿ ಬರೆದು ತಂದ ಭಾಷಣವನ್ನೋದಿದ ಅದರ ಮುಖ್ಯಾಂತಗಳು ಮುಂದೆ ಕೊಟ್ಟಂತಿರುತ್ತವೆ.

೧ ನೀವು ಲಂಡನಕ್ಕೆ ಬಂದಾಗ, ನಮ್ಮ ನಿಮ್ಮ ಉಚ್ಚ ನೀಚತನವಿಲ್ಲೆಂದೂ, ಎಲ್ಲರೂ ಒಂದೇ ದರ್ಜೆಯವರು ಇರುತ್ತೇವೆಂಬದನ್ನೂ ಹೇಳಿದ್ದೇವೆ. ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರಕಿಸಿಕೊಂಡು ಹೋಗಲು ನೀವು ಬಂದಿದ್ದೀರೆಂದೂ, ಆ ಧ್ಯೇಯವನ್ನು ನೀವು ಪೂರ್ಣಮಾಡಿಕೊಂಡು ಹೋಗುತ್ತೀರೆಂದೇ ನಾನು ತಿಳಿದಿರುತ್ತೇನೆ. ಈ ನಿಮ್ಮ ರಾಜಕೀಯ ಯಾತ್ರೆಯು ಕೆಲ ಜನರಿಗೆ ನಿರಾಶಜನಕವಾದರೂ, ಬ್ರಿಟಿಶ ಜನರು ನಿಮ್ಮ ಆದರಸತ್ಕಾರ ಮಾಡಿ, ನಿಮ್ಮನ್ನು ಸರಿಸಮಾನಸ್ಕಂದರಾಗಿ ನಡಿಸಿಕೊಂಡು ತಕ್ಕವಾದ ಮಟ್ಟಿಗೆ ರಾಜಿಯ ವಿಚಾರ ನಡೆಸಿದರೆಂಬ ನಿಶಯದಲ್ಲಾದರೂ ಎಲ್ಲರ ಮತೈಕ್ಯವಾಗಬಹುದು.

೨ ನೀವು ಹಿಂದುಸ್ಥಾನಕ್ಕೆ ಹೋದಬಳಿಕ ನೀವು ಮಾಡಿದ ಕೆಲಸದ ವಂದಿಯನ್ನು ನಿಮ್ಮವರಿಗೆ ಒಪ್ಪಿಸಬೇಕಾಗುವದು. ಇಲ್ಲಾದ ನಿರ್ಣಯಗಳು ಹಿಂದುಸ್ಥಾನದ ಲೋಕಮತಕ್ಕೆ ಒಪ್ಪಿಗೆಯಾದರೇ- ಅವನ್ನು ಅಂಗೀಕರಿಸತಕ್ಕದ್ದೆಂದು ನೀವು ಈ ಪರಿಷತ್ತಿನಲ್ಲಿ ಭಾಷಣ ಮಾಡಿದ್ದೀರಿ. ನೀವು ಮಾಡಿದ ಕೆಲಸದ ಪರಿಣಾಮವೇನಾಗುವದೆಂಬದು ಈ ಸ್ಥಂತರ ತಿಳಿದು ಬರುವದು. ನಿಮ್ಮಂತೆ ನಮಗೂ ನಮ್ಮ ದೇಶದ ಲೋಕಮತವೇನಾಗುತ್ತದೆಂಬದನ್ನು ಲಕ್ಷಿಸಬೇಕಾಗುತ್ತದೆ. ರಾವುಂಡಕೇಬಲಿನಲ್ಲಾದ ಠರಾವುಗಳನ್ನು ಹಿಂದುಸ್ಥಾನದಲ್ಲಿ ವಿವೇಚನೆ ಮಾಡಿ, ನೀವೆಲ್ಲರೂ ಅದರ ಪುರಸ್ಕರ್ತರಾದಬೇ, ನಿಮ್ಮ ಈ ರಾಜಕೀಯ ಯಾತ್ರೆಯು ಹಿಂದೀ ಜನರ ಸಹಕಾರತೆಯಿಂದ ಯಶಸ್ವಿಯಾಗದೆ ಹೋಗಲಾರದು.

೩ ಘೂಂಟಿಗುಸಾಹೇಬರ ಸುಧಾರಣೆಯ ಜತೆ ಹೀದಸಾಮೈ ಹತ್ತಿಪ್ಪತ್ತಾಗ್ಯೆ ಹತ್ತು ವರ್ಷಗಳ ನಂತರ ಕೂಡುವ ಸಾಯಮನ್ನ ಕಮೀಶನದ ಸೂಚನೆಯಾಗಿತ್ತು. ಸಾಯಮನ್ನರ ಹೆಸರು ಬಂದ ಕೂಡಲೆ ಕೆಲವರಿಗೆ ಸಂಶೆನಿಸಲಿಕ್ಕಿಲ್ಲ. ಈ ಕಮೀಶನದ ರಿಪೋರ್ಟು ಬರದಿದ್ದರೆ- ಬ್ರಿಟಿಶರ ಮತ್ತಿನ್ನು ಏನು ಗಳ ಪ್ರತಿನಿಧಿಗಳು ಈ ಪ್ರಶ್ನೆದ ವಿಚಾರವನ್ನು ವಿಸ್ತಾರವಾಗಿ ವಿಚಾರ ಮಾಡಲಿಕ್ಕೆ ಸಿದ್ಧರಾಗುತ್ತಿದ್ದಿಲ್ಲೆಂಬದನ್ನು ಧ್ಯಾನದಲ್ಲಿಡಿರಿ.

೪ ಹಿಂದುಸ್ಥಾನದ ಮಹತ್ವದ ಪಕ್ಷವು (ಕಾಂಗ್ರೆಸ) ಅವರಲ್ಲಿರುವದೆಂದು ದುಃಖದ ಸಂಗತಿಯು. ಬ್ರಿಟಿಶ ಧುರೀಣರು ಹಿಂದೂ ಅಥವಾ ಬೇರೆ ಕುಲದ ಬಗ್ಗೆ ಪಕ್ಷಪಾತಮಾಡುವದಿಲ್ಲ ನಮ್ಮ ಸ್ವಾರ್ಥಸಾಧಿಸುವದಕ್ಕಾಗಿ ಮತಭೇದದ ಉಪಯೋಗಮಾಡಬೇಕೆಂದು ನಮ್ಮ ಇಚ್ಛೆಯಿಲ್ಲ. ಈ ಪರಿಷತ್ತಿನ ಕಾರ್ಯದಿಂದ ನಮ್ಮನಿಮ್ಮೊಳಗಿನ ಅಂತರವು ಬಹಳ ಕಡಿಮೆಯಾಗಿದೆ. ಆದರೆ ನಿಮ್ಮಲ್ಲಿ ಜಾತಿಜಾತಿಗಳ ಮತಭೇದದ ಛಿಡಂಬಡಿಕೆಯಾಗಬೇಕು.

೫ ಜಗತ್ತಿನಲ್ಲಿ ಯಾರಾ ಯಾವ ವ್ಯಕ್ತಿಗಳು ಬೇರೆ ಬೇರೆ ರಾಷ್ಟ್ರಗಳಲ್ಲಿ ವಿಶುದ್ಧತೆಯನ್ನುಂಟುಮಾಡಲಿಕ್ಕೆ ಪ್ರಯತ್ನಿಸುತ್ತವೆ; ಆ ವ್ಯಕ್ತಿಗಳು ಜಗತ್ತಿನ ಸ್ವಾತಂತ್ರ್ಯದ ಮಾರ್ಗದಲ್ಲಿ ವಿಘ್ನ ತರುತ್ತವೆ. ಸಹಕಾರತೆಕ್ಕೆ ವಿಘ್ನ ತರುವಂಥವರು ಜಗತ್ತಿನ ಹಿತಕರ್ತರಲ್ಲ. ಈ ಯುಕ್ತಿವಾದವನ್ನು ಬರೆಗೆ ತಜ್ಜಬೇಕಾದರೆ- ಹಿಂದುಸ್ಥಾನದ ತರುಣರಿಗೆ ವ್ಯಾವಹಾರಿಕ ರಾಜಕಾರಣದ ಪ್ರಶ್ನೆ ಬಿಡಿಸಲು ನಿಮ್ಮ ಉತ್ಸಾಹವನ್ನುಪಯೋಗಿಸಲಿಕ್ಕೆ ಈ ಪ್ರಶ್ನೆವು ನಿಮಗೆ ನಿಜವಾಗಿ ಪ್ರೋತ್ಸಾಹ ಕೊಡದಿರದು.

೬ ಹಿಂದುಸ್ಥಾನಕ್ಕೆ ಪೂರ್ಣ ಜವಾಬದಾರಿಯ ರಾಜ್ಯಪದ್ಧತಿಯ ಅಧಿಕಾರ ಕೊಡಬೇಕೆಂತಲೇ ಬ್ರಿಟಿಶ ಸಂಕಾರದ ಧೋರಣವುಂಟು. ಗವ್ಹರ್ನರ ಜನರಲ್ ಕೌನ್ಸಿಲವು ಲೆಜಿಸಲೇಟಿವ್ ಅಸೆಂಬ್ಲಿಗೆ ಜವಾಬದಾರವಾಗಿರಬೇಕೆಂಬ ತತ್ವವು ನಮಗೆ ಒಪ್ಪಿಗೆಯಾಗಿದೆ. ಆದರೆ ಸಂಕ್ರಮಣದ ಕಾಲದಲ್ಲಿ ಕೆಲವು ಅಧಿಕಾರಗಳನ್ನು ಹ್ಯಾಯಿಸರಾಯರಿಗೇ ಅಧೀನವಾಗಿ ರತಕ್ಕದ್ದು; ಅವು ದ್ವೇಶರಕ್ಷಣೆ ಮತ್ತು ಪರದೇಶಗಳ ಕಾರಭಾರ. ಇವಿಟ್ಟು ಖಾತೆಗಳ ಹೊರ್ತು ಹಿಂದುಸ್ಥಾನದ ಹಣವನ್ನು ಅಸೆಂಬ್ಲಿಯು ತನಗೆ ತೋರಿದಂತೆ ವೆಚ್ಚ ಮಾಡುವ ಅಧಿಕಾರ ಪಡೆಯುವದು. ಮತ್ತು ಕರಕೂಡಿಸಿ, ಸಂಪಾದನೆ ಮಾಡುವ ಅಧಿಕಾರವೂ ಅದಕ್ಕಿರುವದು.

೭ ಸದ್ಯಸ್ಥಿತಿಯಲ್ಲಿ ಹ್ಯಾಯಿಸರಾಯರ ಕೌನ್ಸಿಲದಲ್ಲಿ ದ್ವಿಗಳ ದೊರೆತನವಾಗುವದು ಸಹಜವೆ ಇವೆಡರಲ್ಲಿ ವಿರೋಧ ಬರದಂತೆ ಆಯಷ್ಟು ಪ್ರಯತ್ನ ಮಾಡುವದು ಅವಶ್ಯಕವಾದದ್ದು. ಗವ್ಹರ್ನರ ಜನರಲ್ಲರಿಗೆ ವಿಶಿಷ್ಟ ಅಧಿಕಾರವಿರುವದು ಸ್ವಾಭಾವಿಕರೀತಿಯಿಂದ ಅವಶ್ಯವಾದರೂ, ಮಂತ್ರಿ ಮಂಡಲದವರು ರಾಜ್ಯಕಾರಭಾರದಲ್ಲಿ ಅಧಿಪ್ರಸಂಗ ಬರದಂತೆ ಮಾಡುವದೇ ಉಚ್ಚಿತವು

೮ ಇಲ್ಲಿಯ ರಾಜಕಾರ್ಯಕ್ಕೆ ಜನತೆಗೆ ಪೂರ್ಣ ಜವಾಬದಾರಿ ದೊರೆಯಬೇಕೆಂಬ ವಿಶೇಷ ಸರಕಾರದ ಧೋರಣವಿರುವದು. ಮತ್ತು ಗವ್ಹರ್ನರಿಗೂ ವಿಶಿಷ್ಟ ಸ್ಥಿತಿಯು ದೆಸೆಯಿಂದ ಸ್ವೇಶಲ ಅಧಿಕಾರವಿರುವದು.

೯ ಸದ್ಯ ಇದನ್ನು ವಿಸ್ತಾರವಾಗಿ ಹೇಳುತ್ತಾ ಹೋಗುವದಕ್ಕೆ ಸಮಯವಿಲ್ಲ. ಈ ಪ್ರಕಾರ ನಾವು ರೂಪರೇಷಮಾಡಿದ ಸ್ವರಾಜ್ಯ ಯೋಜನೆಯ ವಿಷಯವಾಗಿ ಹಿಂದೀ ರಾಷ್ಟ್ರದ ಮತವೇನಾಗಿರುತ್ತದೆಂಬದನ್ನು ನೋಡುವದೂ ನಮ್ಮ ಉದ್ದೇಶವಾಗಿದೆ. ಹ್ಯಾಯಿಸರಾಯ ಲಾರ್ಡ ಆಯರ್ವಿನ್‌ನವಾಹೇಬರು ಕಾಂಗ್ರೆಸದವರಿಗೆ ಮಾಡಿಕೊಂಡ ವಿನಂತಿಯ ಮೇರೆಗೆ ಕಾಯದೆಭಂಗದವರು ನಮ್ಮ ಯೋಜನೆಗಳ ವಿಚಾರಮಾಡಿದರೆ- ಮತ್ತು ಅದು ಯಶಸ್ವಿಯಾಗುವ ಬಗೆಯಿಂದ ಅವರಲ್ಲೇನಾದರೂ ಸೂಚನೆಮಾಡಿದರೆ- ಕಾಂಗ್ರೆಸದವರ ಸಹಕಾರ ಪಡೆಯುವದಕ್ಕಾಗಿ ಅವಶ್ಯವಾದ ಏರ್ಪಾಡುಮಾಡುವೆವು.

೧೦ ರಾಜಕೀಯ ಕೈದಿಗಳಿಗೆ ಮಾಫೀ ಕೊಡಬೇಕೆಂದು ಸರ ಸಪ್ರುಸಾಹೇಬರು ಹೇಳುವದು ನಮಗೆ ಮಾನ್ಯವದೆ. ಹಿಂದುಸ್ಥಾನದಲ್ಲಿ ಕಾಯದೆಭಂಗವನ್ನು ಶಪಕೂಬ ಮಾಡಿ; ದೇಶದಲ್ಲಿ ಶಾಂತತೆಯುಂಟಾದರೆ . ನಾವು ಸಂತೋಷದಿಂದ ಮಾಫಿಯನ್ನು ಜಾಹೀರ ಮಾಡುವೆವು.

ಪಾರ್ಲಮೆಂಟ ಸಭೆಯಲ್ಲಿ ಮೆ ಮ್ಯಾಕಡೋನಾಲ್ಡ್‌ಸಾಹೇಬರು ಹಿಂದುಸ್ಥಾನದ ಭಾವೀ ಸ್ವರಾಜ್ಯ ವಿಷಯವಾಗಿ ಹೇಳಿದ ವಾತುಗಳ ವಿಚಾರ ಮಾಡಿ, ಈ ಬಗ್ಗೆ ಕಾಂಗ್ರೆಸವು ಯಾವ ರೀತಿಯಿಂದ ನಡೆಯಬೇಕೆಂದು ಗೊತ್ತು ಮಾಡಲು- ಇಂದಿನ ದಿವಸ ಅಲ್ಲಾಬಾದಿನಲ್ಲಿ ಪಂಡಿತ ಮೋತಿಲಾಲರ ಸನ್ನಿಧಿಯಲ್ಲಿ ಕಾಂಗ್ರೆಸದ ವರ್ಕಿಂಗ ಕಮಿಟಿ ಕೂಡಿತಕ್ಕದಿದೆ.

ಮುದ್ರಣಾಲಯಗಳ ಕಾಯಿದೆ ಮುಂದೆ ಬಿತ್ತು

—(೨)—

ಮುದ್ರಣಾಲಯಗಳ ಕಾಯಿದೆ ಮತ್ತು ಜಪರಿಗೆ ಕಾಯಿದೆಬಿಗಿಗೊಳಿಸಿ, ಈರ ಕಂಡಾಯ ಕೊಡಬೇಡಿರಿಂದು ಹೇಳುವ ಕಾಯಿದೆಯನ್ನು ಅಸೆಂಬ್ಲಿಯಲ್ಲಿ ಈ ನಾಲ್ಕು ದಿವಸಗಳಲ್ಲಿ ಸರಕಾರದವರು ಪಾಸುಮಾಡಿಕೊಳ್ಳಬೇಕೆಂದಿದ್ದರೆಂಬದನ್ನು ನಿನ್ನೆನೆ ದಿನವೇ ಒರೆದಿರುತ್ತೇವಷೇ; ಈ ಕಾಯಿದೆಯನ್ನು ಅಸೆಂಬ್ಲಿಯಾ ಮುಂದೆ ತರಲೇಬಾರದು. ಹೀಗಾಗದಿದ್ದರೆ – ಅದನ್ನ ಕೆಲಕಾಲವಾದರೂ ಮುಂದೆ ಹಾಕಬೇಕೆಂದು ಲಾರ್ಡ ಲಿಟ್ಟರ್ನಸಾಹೇಬರ ಕಡಿಗೆ ಕೃಷ್ಣಶಿಷ್ಟಾಮ ಮಾಡಲೋಸುಗ ಶ್ರೀ. ಭಂಗಾ ಚಾರ್ಯ, ಶ್ರೀ ವಂಕಟಶಿಂಗ, ಮುಸುದ್ದಿನ ವಕ್ತು ಶಹಾನವಾಜರು ಲಾರ್ಡ ಆಯರ್ವಿನ್ನಸಾಹೇಬರನ್ನು ಕಾಣಲಿಕ್ಕೆ ಹೋಗಿ ಬಂದರು, ಇದರ ಮರು ದಿವಸವೇ ಅಸೆಂಬ್ಲಿಯಲ್ಲಿ ಮೆ. ಕ್ರೈರಾರನಾಹೇಬರು ಸದ್ಯ ಈ ಬಿಲ್ಲುಗಳನ್ನು ಮುಂದೆ ಹಾಕಿದಂತೆಯೂ, ಅವಶ್ಯ ಕಂಡರೆ- ಆವನ್ನಾಗಲಿ ಲರ್ಡಿನನ್ನಗಳನ್ನಾಗಲಿ ಪುನಃ ಅಮಲಿನಲ್ಲಿ ತರುವ ವಿಚಾರವನ್ನು ಸರಕಾರದವರು ತಮ್ಮಾಧೀನದಲ್ಲಿಟ್ಟುಕೊಂಡಿದ್ದಾರೆಂದೂ ಉಸುರಿದರು. ಕಾಯಿದೆಯನ್ನು ಮುಂದೆ ಹಾಕದೆ, ಅದನ್ನು ಪುನಃ ಅಸೆಂಬ್ಲಿಯ ಮುಂದೆ ತಂದರೆ- ಅದನ್ನು ತಾವು ತಮ್ಮ ಭಣದವರೊಂದಿಗೆ ವಿರೋಧಿಸುವಂತೆ ಆಚಾರ್ಯರು ಸಾಹೇಬರಿಗೆ ಆ ಕ್ಷಣವೇ ಸ್ಪಷ್ಟಿಡೆಯು ಉತ್ತರ ಕೊಟ್ಟರು. ಕಾಯಿದೆ ಹೋದರೂ, ಅದರ ಸುಂಕವು ಇದ್ದೇ ಇರುವದು. ಲರ್ಡಿನನ್ನು ಅರು ತೀರ್ಪಿಂತೂ ಬೇತಾಳನ ಸ್ವರೂಪ ಧಾರಣ ಮಾಡಿರುವದು. ಮೆ ಕ್ರೈರಾರನಾಹೇಬರ ಹೇಳಿಕೆಯ ಪ್ರಕಾರ ಪುನಃ ಉತ್ಪಾಟನೆಗೂ ಬನುವುಂಟು. ಹೀಗೆ ಕಾಯಿದೆಯನ್ನು ಮುಂಗೆ ಹಾಕಿದ್ದರಿಂದ ಮುದ್ರಾಲಯಗಳಿಗೆ ಎಳ್ಳಷ್ಟು ಲಾಭವಿರುವದಿಲ್ಲ.

— —

ರಂಗಪೂರದ ಪೋಲಿಸ ಸಾಹೇಬರ ಮೇಲೆ ೨೧ ಲಂಚದ ಆರೋಪಗಳು

—(೮)—

ಬಂಗಾಲಕ್ಕೆ ಸೇರಿದ ರಂಗಪೂರ ಜಿಲ್ಲೆಯಲ್ಲಿ ಮಿ. ಸುಕುಮಾರ ಸೇನಗುಪ್ತರೆಂಬುವರು ಪೋಲಿಸ ಸುಪ್ರಿಂಟಾಡೆಂಟರಾಗಿದ್ದರು. ಇವರ ಮೇಲೆ ಲಂಚರುಷವತ್ತಿನ ೨೧ ಆರೋಪಗಳು ಹೊತ್ತವು. ಸರಕಾರದವರು ಇವರಿಗೆ ತಿಂಗಳಿಗೆ ೨೨೪ ರೂಪಾಯಿ ಪೆನಶನ ಕೊಡುವದನ್ನು ಗೊತ್ತು ಮಾಡಿ ಬಲಾತ್ಕಾರದಿಂದ ರಾಜೀನಾಮೆಮಾಡಿದರು.

———

ಸ್ವಯಂಶೇವಕರು ಮಾಡಿದರೆ ಅಪರಾಧ.

—(*)—

ಸಾರ್ಜಂಟರು ಮಾಡಿದರೆ ಅಪರಾಧವಲ್ಲ.

—೫(*)೫—

ವಿಂಬಯಿಯಲ್ಲಿ ಹರತಾಳದ ದಿನದ ಭೂಲೇಶ್ವರದಲ್ಲಿ ಸಾರ್ಜಂಟರು ದಾರೀ ಹೋಗುತ್ತಿರುವ ಜನರ ಗಾಂಧೀ ಟೊಪ್ಪಿಗೆಗಳನ್ನು ತಕ್ಕೊಂಡು, ಅವನ್ನು ನಡು ಬೀದಿಯಲ್ಲಿ ಸುಟ್ಟರು. ಇದೇನು ಒಂದಾದ್ದೂರಿಯಲ್ಲ. ಕೇವಲ ಹೀನ ವೃತ್ತಿಯು. ಗಾಂಧೀ ಟೊಪ್ಪಿಗೆ ಹಾಕಿದವರನ್ನು ಹಿಡಿದು, ತುರಂಗದಲ್ಲಿ ಹಾಕುವದಕ್ಕಿಂತ ಹೀನತನವು. ಸರಕಾರೀ ಭೃತ್ಯರಾದ ಮಾತ್ರದಿಂದ ಮಯರ್ಯಾಕೆಸಿಕೊಂಡರು. ಇದೇ ನೋಡಿರಿ. ಕಾಂಗ್ರೆಸವ ಯಾವನೊಬ್ಬ ಹ್ಯಾಲಂಟಿಮುರನು ಒಬ್ಬನ ತಲೆಯ ಮೇಲಿನ ಇಂಗ್ರೇಜಿ ಟೊಪ್ಪಿಗೆ ಕಸಕೊಂಡು ಅದನ್ನು ಸುಟ್ಟಿದ್ದರೆ- ಆತನ ಮೇಲೆ ಒಲಾತ್ಕಾರದ ಕಳವು, ಪೋಲಿಸ ಶಬ್ದಗಳಲ್ಲಿ ಹೇಳುವ ಪ್ರಕಾರ "ಜಾಳೇ" ಸುಡುವದು, ಸಾರ್ವಜನಿಕ ಕೆಲಸಕ್ಕೆ ವೈತ್ಯಯ ಇನ್ನೇ ಮೊದಲಾದ ಆರೋಪಗಳು ಬಂದು, ಅವನಿಗೆ ಎಷ್ಟೆಷ್ಟೋ ಶಿಕ್ಷೆಯಾಗುತ್ತಿತ್ತು. ಸಾರ್ಜಂಟರು ಇದಾವ ಅಪರಾಧ ಮಾಡಿದರೂ ಒಂದನಗಳಿಗೊಳಗಾಗದೆ, ಬಹಿರಂಗವಾಗಿಯಾ ಬಿಡಿ ಗುಪ್ತವಾಗಿ ಮೇಲಧಿಕಾರಿಗಳಿಂದ ಭಾವ್ಯ. ಭಾವು ಎಂದು ಸರ್ಟಿಫಿಕೇಟು ಪಡೆದಿರಬಹುದು

———

ತಮ್ಮ ಪ್ರಕೃತಿಯನ್ನು ಕಾರಿತು ಮಹಾತ್ಮರ ಸ್ವಶಃ ಹೇಳುವಿಕೆ

—(೭)—

ಮಹಾತ್ಮರು ಸಾಬರಮತಿಗೆ ಬರೆದು ಕಳಿಸಿದ ಒಂದು ಪತ್ರದಲ್ಲಿ ತಮ್ಮ ಪ್ರಕೃತಿಯ ವಿಷಯವಾಗಿ ಮುಂದೆ ಕೊಟ್ಟಂತೆ ಹೇಳುತ್ತಾರೆ.

ಚಿಂತೆಮಾಡುವಂಥ ಯಾವ ಭಾಗವೂ ಇರುವದಿಲ್ಲ. ಇರಬೇಕಾದಷ್ಟು ಆರೋಗ್ಯವಾಗಿರುವದಿಲ್ಲೆಂಬದೂ ನಿಜ. ಪ್ರಕೃತಿಯನ್ನು ಕಾಯ್ದುಕೊಳ್ಳಲು ಆಗಾಗ್ಗೆ ಆಹಾರದಲ್ಲಿ ಹೆಚ್ಚು ಕಡಿಮೆ ಮಾಡಬೇಕಾಗುತ್ತದೆ. ನಿತ್ಯದ ಕೆಲಸಗಳು ನಿಯಮದಂತೆ ನಡೆದಿವೆ; ಪ್ರಕೃತಿಯನ್ನು ಜಪ್ತಿಸಿಕೊಂಡಿರಲು ಅದಷ್ಟು ಚಾಗರೂಕರಾಗಿರುವೆವು. ಪುನಃ ಮೊಸರು ಮತ್ತು ಉತ್ತತ್ತಿ ತಕ್ಕೊಳ್ಳುವೆವು. ಬೇಯಿಸಿದ ಕಾಯಿಪಲ್ಲೆಯನ್ನೂ ತಿನ್ನುವ ವಿಚಾರವುಂಟು. ಕೆಲವು ಸಾರೆ ಸಜ್ಜೆ ಮತ್ತು ಜೋಳದ ರೊಟ್ಟಿ ತಿನ್ನುವದಕ್ಕೆ ಪ್ರಾರಂಭಿಸಿತು. ಆದರೆ ಅದು ಮಾನಸಲಿಲ್ಲ. ಆದ್ದರಿಂದ ಇದನ್ನು ಬಿಟ್ಟು ಬಿಟ್ಟದೆ.

———

ಶ್ರೀಕೃಷ್ಣದೇವರಾಯನ ವರ್ಧಂತಿಯು

—(೦)—

ನಂದ್ಯಾಳ ನಿವಾಸಿಗಳು ವಿಜಯನಗರ ಸಾಮ್ರಾಜ್ಯಾಧಿಪತಿಯಾಗಿದ್ದ ಶ್ರೀಕೃಷ್ಣದೇವರಾಯನ ಉತ್ಸವವನ್ನು ೧೧ನೆಯ ಫೆಬ್ರವರಿಯ ದಿನದ ಮಾಡುವರು. ನಾನಾಕರದ ಶಕ್ತಿ ನಾಪಾರ್ಧಾದ ಆಟಗಳೂ, ನಾಟಕಗಳೂ, ಸಭೆಸವಾಂಭಗಳೂ ಆಗುವವು. ಪ್ರಾಚೀಕಾಲದಲ್ಲಿ ವಿಜಯನಗರ ಸಾಮ್ರಾಜ್ಯದ ವಿಶಾನೆಯನ್ನೇರಿಸುವ ಸಮಾರಂಭ ಮಾಡಿ, ರಾಮನ ಭಾವಚಿತ್ರ ಮೆರವಣಿಗೆ ಹೊರಡಿಸುವರು. ಧಾರವಾಡದಲ್ಲಿಯೂ ಈ ಉತ್ಸವವಾಗಿತ್ತಿದ್ದುಂಟು.

———

ಕಣ್ಣು ಮುಚ್ಚಿ ಭಜನೆ ಮಾಡುವಾಗ ಮರಣ.

—೭-।*೦*।-೭—

ಮೆಕ್ಸಿಕೋ ದೇಶದಲ್ಲಿ ಭೂಕಂಪವಾಯಿತು. ೭೧ ಜನರು ಒಂದು ಕ್ರಿಸ್ತಾಲಯದಲ್ಲಿ ಬೇತಾಕಾರಾಧನೆ ಮಾಡುತ್ತಿದ್ದರು. ಆಗ ಗುಡಿಯು ಅದರಿ, ಬಿದ್ದು, ಇವರೆಲ್ಲರೂ ಸತ್ತರು. ಉತ್ಥಾಪನೆಯ ದಿವಸ ಬರುವ ತಿನಕ ಹುಗಿಯುವ ವೆಚ್ಚ ಉಳಿಯಿತು.

———

ಬೆಂಕೆಯಿಂದ ಕಬ್ಬಿನ ಭಯಂಕರ ನಾಶ.

—(೦)(೦)(೦)—

ಕ್ಯೂಬಾದೇಶಕ್ಕೆ ಸೇಂದ ಮೆತನಸಾಸವೆಂಬಲ್ಲಿ ಕಬ್ಬಿನ ತೋಟಕ್ಕೆ ಬೆಂಕೆ ಹತ್ತಿ ಎರಡು ಕೋಟಿ ಪೌಂಡು ತೂಕದಷ್ಟು ಕಬ್ಬು ಸುಟ್ಟು ಬೂದಿಯಾಯಿತು ಇಷ್ಟು ದೊಡ್ಡ ಹಾನಿಯು ಆ ದೇಶದಲ್ಲಿ ಈ ವರೆಗಲು ಆಗಿದ್ದಿಲ್ಲ.

———

ಮೇಲ ಮತ್ತು ಎಕ್ಸಪ್ರೆಸ ಒಂಡಿಗಳು ಹೊರಡುವ ಸ್ಟೇಶನದಲ್ಲಿ ಪ್ರತಿಯೊಬ್ಬ ಪ್ರಯಾಣಿಕನು ತನಗೊಂದು ಸ್ಥಳವನ್ನೆನ್ನಿದಗಿಕೊಡಬೇಬೇಕೆಂದೂ, ಲೆವ್ವಲ ಕ್ರಾಸಿಂಗಗಳನ್ನು ತೆಗೆದು, ರೇಲ್ವೆಯ ಬುಡದಲ್ಲಿ ದಾರಿಗಳನ್ನು ಮಾಡಬೇಕೆಂದೂ ಲಂಡನ್ನಿನಲ್ಲಿ ಈ ವಿಚಾರವಾಗಿ ಕೂಡಿ ಕಮೀಟಿಯವರು ಅಭಿಪ್ರಾಯಪಟ್ಟಿರುತ್ತಾರೆ.

———

ಇಜಿಪ್ತದ ರಾಜಧಾನಿಯಿಂದ ದಕ್ಷಿಣ ಆಫ್ರಿಕೆಯ ಭೂತೀರದ ಕೇಪಟೌನಿನ ತನಕ, ೮೨೦೦ ವೈಲುಗಳವರೆಗೆ ವಿಮಾನದಿಂದ ಪ್ರವಾಸ ಮಾಡುವ ಕಂಪನಿ ಹೊರಟಿದೆ. ೧೧ ದಿವಸಗಳಲ್ಲಿ ಈ ಪ್ರವಾಸ ಮುಗಿಯುವದು.

ಮಹಾತ್ಮರಿಗೆ ದೇವಾಲಯ ಬೇಕು.

—(೦)(೦)(೦)—

ಹೆಣ್ಣುಮಕ್ಕಳಿಗೆ ಹಡೆಯುವ ಕಾಲಕ್ಕೆ ಬಹಳ ಕಡವಾಗಿ ತೊಂದರೆಯಾದರೆ- ರಾಮಟಂಕಿ ವರ ಥವಾ ಅಳಬರಿ ಮೊಹರನ್ನು ನೀರಲ್ಲೆದ್ದಿ ಆ ನೀ ಕುಡಿಸುವರು. ಆ ವರ್ಗದಲ್ಲಿ ಮಹಾತ್ಮರೂ ವದು. ಗದಗಿನಲ್ಲಿ ಶ್ರೀ ಪೀಠ್ರೆ ಸುಬ್ರಾಯರ ಪ ಕೃತ್ಯಾಜ್ಞಾಯಿಯವರು ವಿಶೇಷ ಕಷ್ಟಪಡುತ್ತಿ ದನ್ನು ಕೇಳಿ, ಓರ್ವ ಗಾಂಧೀ ಭಕ್ತನು ಅವ ಮಹಾತ್ಮರ ಭಾವಪಟವನ್ನು ಎದ್ದಿದ ನೀರನ್ನು ಸಲು- ಕೂಡಲೆ ಅವರಿಗೆ ಪುತ್ರೋತ್ಪತ್ತಿಯಾಯ ಕೂಸು ಬಾಣತಿಯು ಸುಖವಾಗಿದ್ದಾರೆಂದು ರು ಕರ್ನಾಟಕದಿಂದಿನಲ್ಲಿ ಬರೆದಿದೆ.

———

ರೇಲ್ವೆ ಮತ್ತು ಮೋಟಾರಗಳಿಗೆ ಮೇಲಾಟ.

—ಃ(**)ಃ—

ರೇಲ್ವೆಯಿಂದ ಹೋಗುವ ಸರಕು ಎಷ್ಟೋ ಸಾರಿ ಕ್ಕದ್ದಂತೆ ಮುಟ್ಟುವದಿಲ್ಲೆಂದು, ವರ್ತಕರು ಎ ಕಡೆಯಲ್ಲಿಯೂ ಹೇಳುವರು. ಸಿಲೋನದಲ್ಲಿ ರೇ ಲ್ವೆ ಬಹಳ ಅವ್ಯವಸ್ಥೆಯುಂಟಾದ್ದರಿಂದ, ವ್ಯಾ ರಿಯು ತನ್ನ ಸರಕುಗಳನ್ನು ಮೋಟಾರ ಲಾರಿಗ ಕಳಿಸಹತ್ತಿದರು. ಹೀಗಾಗಿ ರೇಲ್ವೆಯು ಗಳಿ ಸಂಪತ್ತಕ್ಕೆ ಬಂತು. ವರ್ತಕರು ಮೊದ ರೇಲ್ವೆಗೇ ಉದಾರಾಶ್ರಯ ಕೊಡಬೇಕು. ತಕರಾರುಗಳನ್ನು ತೆಗೆಕೊಂಡು ಅವನ್ನು ಮಾಡಬೇಕೆಂಬದಕ್ಕಾಗಿಯೇ ಆ ಸರಕಾರದ ಕೆಲ ಕಾಮದಾರರನ್ನು ನೇಮಿಸಿವ್ದಾರೆ.

ಲಾಹೋರಿನಲ್ಲಿ ವಿಲಾಯತಿಯ ಅರವೆಯ ಗಳ ಮುಂದೆ ಪಿಕಟಿಂಗ ಮಾಡಿದ್ದಕ್ಕಾಗಿ ಕ್ಯಚಿಕ್ಕೆ ಹುಡುಗೆಯರನ್ನು ಹಿಡಿದಿದ್ದಾರೆ. ಪೋಲೀಸರು ಇವರಿಗೆ ಜಾಮೀನು ಕೊಡಲಿಕ್ಕೆ ಳು ಇವರು ಜಾಮೀನು ಕೊಡದೆ, ಲಾ ರುವರು. ಪ್ರಮೀಲಿಯರೇ ಸೈ.

———

ಮಹಾತ್ಮರನ್ನು ಜಾಸಿಕದ ತುರಂಗಕ್ಕೆ ಕ ದು ಹಚ್ಚಿದ ವರ್ತಮಾನವು ಸುಳ್ಳಾಗುತ್ತ ಮುಂಬಯಿ ಸರಕಾರದಿಂದ ಜಾಹೀರ ಮಾ ಯಿ.

———

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಮಾಳಮಡ್ಡಿ

ಮತ್ತು ———— ಧಾರವಾಡ

ಕಾಮನಕಟ್ಟಿ

ನಮ್ಮಲ್ಲಿರುವ ಕರ್ನಾಟಕದಲ್ಲಿ ಅಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಯಿದೆ ಸಹ) ನಕಾಶೆ ಛತ್ರಗಳೂ ಬರವಣಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರಯುವವು. ಭಾಂಡಾ ರದ ಬೆಲೆಪಟ್ಟಿ ಬೇಕಾದವರು ಳಆಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಪಯುತ ಥುಂಟು. ಮಾದರಿಗಾಗಿ ಕೆಲವು ಹೆಸರು ಕಳಗೆ ಕೊಟ್ಟಿದ್ದೇವೆ.

೧. ಕರ್ನಾಟಕ ಸಾಮ್ರಾಜ್ಯ ಸ. ೧೯೫. ಪ್ರತಿ ೧ಕ್ಕೆ	೨- ೪-೦
೨. ಕಥೆಗಳನ್ನೊಳಗೊಂಡ ವೀರಬಲ್ಲ ಚರಿತ್ರೆ ಸಚಿತ್ರ	೧- ೫-೦
೩. ಛತ್ರಪತಿ ಸಿವಾಜಿ ಮಹಾರಾಜ	೧- ೫-೦
೪. ಕರ್ನಾಟಕ ಸಿಂಹಾಸನ ಸಾಪನೆ	೨-೧೨-೦
೫. ಚರಿತ್ರ ಸಂಗ್ರಹ ಭಾ. ೧,	೧ ೦ ೦
೬. ಅಳಸಿಂಗಾಚಾರ್ಯರ ರಾಮಾಯಣ ೪ ಸಂಪುಟಗಳು	೪-೦-೦
೭. ಮಹಾರಾಣಿ ಲಕ್ಷ್ಮೀಬಾಯಿ ಝಾನ್ಸಿ	೧೪-೮-೦
೮. ಕರ್ನಾಟಕ ಕವಿಚರಿತ್ರೆ ಭಾಗ ೧, ೨, ೩	೨- ೦-೦
೯. ದಾಂಪತ್ಯ ವಿಜ್ಞಾನ ಸಂತಾನವಿಜ್ಞಾನ ಪ್ರತಿ ೧ಕ್ಕೆ	೧೬-೦-೦
೧೦. ಲ್ಯಾಂಡ ರೆವ್ಹಿನ್ಯೂ ಕೋಡು	೧- ೮-೦
೧೧. ಗ್ರಾಮ ನಮೂನೆ ಲೆಕ್ಕದ ಪುಸ್ತಕ	೨-೧೧-೦
೧೨. ಸೀಧರ್ಮನೀತಿ, ಗೃಹಕಾರ್ಯ ನಿರ್ವಾಹಕ್ರಮ ಪ್ರತಿ ೧ಕ್ಕೆ	೨-೧೨-೦
೧೩. ಇಸೂಪನೀತಿ ಕಥೆ ಭಾ. ೧, ೨,	೦-೧೦-೦
೧೪. ಕಾರ್ತನ ಕಂಪಾಭರಣ	೨- ೪-೦
	೧-೧೦-೦

ಶ್ರೀಪಾದ ರಾಮಚಂದ್ರ ಜೋಶಪಾಂಡೆ ಬಿ. ಎಸ್. ಸಿ.

ಹೊಲಿಗೆ ಕಲಿಸುವ
ರತ್ನದಂಥ ಪುಸ್ತಕ.

—(೨)—

ಜೆಂ ಸಿಸ್ಟೀಮ ಆಫ ಕಟಿಂಗಮೆಂಬ ಅಮೂಲ್ಯವಾದ ಬಕ್ಕ ಪುಸ್ತಕವು ಈಗ ತಾನೆ ಮುದ್ರಣ ಹೊಂದಿ, ಮಾರಾಟಕ್ಕೆ ಸಿದ್ಧವಾಗಿದೆ. ಗಂಡಸರು, ಹೆಂಗಸರು ಹುಡುಗರು ಇವರಿಗೆ ಸರಿಯಾಗಿ, ಅಚ್ಚುಕಟ್ಟಾಗಿ ಎಷ್ಟು ಒಟ್ಟೆ ಬೇಕಾಗುತ್ತದೆಂಬದನ್ನು ನ ಶಾಸ್ತ್ರವಾಗಿ ಇದರಲ್ಲಿ ಬರೆದಿರುತ್ತದೆ. ಮತ್ತು ಎ ಲ್ಲರಿಗೂ ದೇಹಲಕ್ಷಣೆಯ ವಿಚಾರವಾಗಿ ಉಡತೊ ಡಿಗೆ ಮತ್ತು ರಕ್ಷಣೆ ಎಂಬ ಭಾಗವು ಈ ಪುಸ್ತಕ ದಲ್ಲಿ ಸೇರಿಸಲ್ಪಟ್ಟಿದೆ. ಬೆಲೆ ಮೂರು ರೂಪಾಯಿ. ಅಂಚೆ ಹಾಸಿಲು ಹೆಚ್ಚಿಗೆ ಏದಾಣೆ. ಪ್ರತಿಯೊಂದು ಕುಟುಂಬದವರೂ ಈ ಪುಸ್ತಕದಲ್ಲಿ ಸಂಗ್ರಹದಲ್ಲಿಟ್ಟು ಕೊಳ್ಳಬೇಕು. ಅಂದಹ ಸಿಂಪಿಗರು ಹೇಳಿದಂತೆ ಹೆ ಚ್ಚಿಗೆ ಒಟ್ಟೆ ಕೊಟ್ಟು, ಹಣ ಕಳಕೊಳ್ಳುವದು ನಿಃ ಸಂದೇಹವಾಗಿ ತಪ್ಪುವದು.

ವಿಳಾಸ— ರಾವ್ಸ ಟೇಲರಿಂಗ ಕಾಲೇಜ.
೧೪೩ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ (೨)

———

ಧಾರವಾಡದಲ್ಲಿ
ಅಂಗಡಿ ಮತ್ತು
ಬಂಗಲೆಯ ಮಾರಾಟ

—)(—(೪)—)(—

ಮು. ನಂ. ೧೪೬೭ ದುಮ್ಮವಾಡಿನ ಆಂಗಿಮಿ ನುಂಗಳವಾದವೇಟ ಜವಳಿ ಓಣಿಯಲ್ಲಿ ಇರೋದು ಪುಂಡಲೀಕಪ್ಪಾ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕೆಲ್ಲೆದಲ್ಲಿ ಶ್ರೀ. ಹೇಬಳಕ ಇವರ ಬಂಗ್ಲೋದ ಎದುರಿನಲ್ಲಿ ಮಿ. ಫೆರ್ನಾಂ ಡಿಸರು ಬಾಡಿಗೆಯಿಂದಿರೋದು.

ಸೂಚನೆ- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಜಿಲ್ಲೆ ಮತ್ತು ಪೇರೆ ಪೂರ್ತಿಯನ್ನು ಸೊಲಾದಕ ವಿಜಯ ಇವರಿಗೆ ತಿಳಿಸಬೇಕು.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಳೇರ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R N B 1443

ನಿತ್ಯ ಪತ್ರ

ವಿಜಯ

ಟೆಲಿಗ್ರಾಮ್

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಜೋಷಿ.

ವರ್ಷ ೧೩ ಧಾರವಾಡ ಶುಕ್ರವಾರ ತಾರೀಖು ೩೩ ನೇ ಜನೇವರಿ ೧೯೩೧ (ಸಂಚಿಕೆ ೧೫೮

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ೦ ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ ಅದನ್ನು ಮಾರಾಟಕ್ಕೆ ಸಿದ್ಧವಾಡಿಸುತ್ತೇವೆ. ಇದರಲ್ಲಿ ವಾದೀ ಶ್ರೀ ಶಿದ್ಧಾವದೂತರ ಅಸಲರ್ಜಿ, ಶ್ರೀ ಅಧೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ಪಾರಿ, ಪ್ರತಿವಾದಿ, ಹಾಗು ಮುನಸಫರ ಭಾವಚಿತ್ರಗಳನ್ನೂ ಕೊಟ್ಟಿರುತ್ತದೆ. ಪುಸ್ತಕಕ್ಕೆ ಜನರ ಅಗ್ರಹದ ಸೂಚನೆಯ ಮೇರೆಗೆ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ಹೆಸಿಸಿದೆ. ದಾವೆಯು ಮಹತ್ವದ ದೃಷ್ಟಿಯಿಂದ ಇಹು ಪ್ರತಿಗಳು ತೀರ ಖುಸುವೆನಿಸುವವು. ಅದ್ದರಿಂದ ಗ್ರಾಹಕರು ತ್ವರೆಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸುವವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ವ್ಹಿ. ಪಿ. ಖರ್ಚು ಬೇರೆ ಬೀಳುವದು ಪ್ರತಿಗಳನ್ನು ಬೇರೆಯವರು ಪ್ರತಿಯೊಂದಕ್ಕೆ ಏದೂಜೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಹಳ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ವ್ಹಿ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ಔದ್ಯೋಗಿಕ ಶಿಕ್ಷಣ

ದಿ ಕರ್ನಾಟಕ ಟೀಚರಿಂಗ ಮತ್ತು ಕಟಿಂಗ ಕಾಲೇಜ ಧಾರವಾಡ ಮ್ಯಾಕ್ಸಿಮಮ್.

ನಾವು ಚೆತಿ ಮತ್ತು ಇಂಗ್ಲೀಷ ಪದತಿಯಿಂದ ಕಟಿಂಗ ಅಂದರೆ ಅರಿವೆ ಕತ್ತರಿಸುವ ಮತ್ತು ಟೀಲರಿಂಗ ಅಂದರೆ ಅರಿವೆ ಹೊಲೆಯುವ ಸಂಪೂರ್ಣ ಶಿಕ್ಷಣ ಕೊಡುತ್ತೇವೆ. ಫಕ್ತ ಕಟಿಂಗ ಮುದತ ಎರಡು ತಿಂಗಳ ಮತ್ತು ಟೀಲರಿಂಗ ಮುದತ ಮೂರು ತಿ೦ಗಳ ಈ ಪ್ರಕಾರ ಐದು ೫ ತಿಂಗಳಲ್ಲಿ ಪೂರ್ಣ ಶಿಕ್ಷಣ ಕೊಡುತ್ತೇವೆ ಫಕ್ತ ಕಟಿಂಗ ೫೫ ಇಪ್ಪತ್ತೈದು ರೂಪಾಯಿ ಸೀ ಮತ್ತು ಟೀಲರಿಂಗ ೧೫ ಹದಿನೆದು ರೂಪಾಯಿ ಶಿಕ್ಷಣವನ್ನು ಕನ್ನಡ ಮರಾಠಿ ಮತ್ತು ಇಂಗ್ಲೀಷ ಈ ಮೂರು ಬೇಕಾದ ಭಾಷೆಯಲ್ಲಿ ಕೊಡುತ್ತೇವೆ. ಈ ಶಿಕ್ಷಣದಿಂದ ನಿದ್ಯಾರ್ಥಿಯ ತನ್ನ ವರ್ಷದ ಸ್ಥಿತಿಯ ಪ್ರಕಾರ ತಿಂಗಳಾ ಕನಿಷ ಆರವತ್ತು ರೂಪಾಯಿ ಗಳಿಸಬಲ್ಲನು. ವಿಶೇಷ ಮಾಹಿತಿ ಪತ್ರಿಕೆ ಬೇಕಾದಲ್ಲಿ ಸಮಕ್ಷವಾ ಅಧವಾ ಒಂದು ಆಣೆ ಪೋಸ್ಟ ತೀರೇಟು ಕಳಸಬೇಕು.

ಆರ್. ಬಿ. ಮುಧೋಳಕರ
ಪ್ರಿನ್ಸಿಪಾಲ ಮಿಸ್ಸ. ಪಿ.ಸಿ.ಪಾಲ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ವ ಬ್ಯಾಂಕ ಲಿಮಿಟೆಡ

ಮುರಗಳವಾರ ಪೇಟ ಧಾರವಾಡ.

ಕೋ ಆಪರೆಟಿವ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗಂಯು ಎಂಟು ಲಕ್ಷದ ಮೇಲುಂಟು. ಚಳಿ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಮಾಡಲ್ಪಡುವದು. ಕಾಹೀಮ ಮತ್ತು ದೀಕೆ ತರದ ಡಿವಾಜಿಟಗಳಿಗೆ ಜಾಸ್ತಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	ರೂ. ೧೨-೮-೦
೬ ,,	೬-೦-೦
೩ ,,	೩-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳಿರಿ.

ಮ್ಯಾ ವಿಜಯ ಧಾರವಾಡ

ನೋಟೀಸಿನವರಗಳು

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ನಾಲು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ರೋಕಲಬೋರ್ಡ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂವತ್ತೆ ಇಂಗ್ಲಿಷಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅರು ಆಣೆ ಡಬಲ ಕಾಲಮಿನ ವಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡುಬಹುದು.

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಕಾಲುಷ್ಯ ವಿಕ್ರಮ ವರ್ಷ ಲಾಭ ಮಾಘ ಶುದ್ಧ ೪

ಮಂತ್ರಿಯವರ ಭಾಷಣದೊಳಗಿನ ಉಳಿದ ಕೆಲ ಸಂಗತಿಗಳು.

—(ಮುಂದುವರಿದಿದೆ)—

ಹಿಂದುಸ್ಥಾನದ ಉತ್ಕರ್ಷಕ್ಕಾಗಿ ಇಂಗ್ಲೇಜಿ ಸರಕಾರದವರು ಆಗಾಗ್ಗೆ ವಚನಗಳನ್ನು ಕೊಡುತ್ತ ಬಂದಿದ್ದಾರೆ. ಸೂರ್ಯ ಚಂದ್ರರಿರುವತನಕ ಹಿಂದುಸ್ಥಾನದಲ್ಲಿ ಬ್ರಿಟಿಷ ಸರಕಾರವಿರಬೇಕೆಂತಲೇ ಅಲ್ಲ. ಕೌಲೆತ್ತಿನಂತೆ ಹಿಂದುಸ್ಥಾನವು ಗೋಣು ಬಾಗುತ್ತ ಮೂಕಮೃತ್ತಿಯಿಂದಿರಬೇಕೆಂದಿದ್ದವರಿಲ್ಲ. ಕಾಗಿದ್ದರೆ ನಾವು ಹಿಂದುಸ್ಥಾನಕ್ಕೆ ತಿಕ್ಷಣವನ್ನು ಕೊಡುತ್ತಿದ್ದೆವೇ? ಮಾರ್ಲೆ ಮಿಂಟೋ ಸುಧಾರಣೆ ಕೊಟ್ಟಾಗಲೇ ಪ್ರಗತಿಯ ತಳಗಲ್ಲು ಕೂತಿಸಲ್ಪಟ್ಟಿತು. ಮಾಂಟಿಗೂ ಚೆಲ್ಸ್‌ಫೋರ್ಡರ ಸುಧಾರಣೆಯಲ್ಲಿ ಹತ್ತು ವರ್ಷಗಳ ಅವಧಿ ಹಾಕಲ್ಪಟ್ಟಿತು. ಮತ್ತು ಆಗ್ಗೆ ಸಾಯಮನ್ನ ಕಮೀಶನದ ಗರ್ಭ ಸೂಚನೆಯಾಯಿತು. (ನಗೆ) ಈ ಕಮೀಶನವು ಮಹತ್ವದ ಮತ್ತು ವಿಚಾರಣೀಯವಾದಂಥ ಕೆಲಸ ಮಾಡಿದೆ. (ಪುನಃ ಹಾಸ್ಯ) ಈ ನನ್ನ ಮಾತವು ನಿಮ್ಮಲ್ಲಿ ಅನೇಕರಿಗೆ ಮಾನ್ಯವಾಗಲಿಕ್ಕಿಲ್ಲೆಂಬುದು ನಿಜ. ರಾವ್ಹಂಡಟೇಬಲವು ಕಾಯದೆ ಮಂಡಲವಲ್ಲಿ ಬದನ್ನು ಲಕ್ಷದಲ್ಲಿಡರಿ. ಮತಭೇದವನ್ನು ಬರೆದಿಡಲಿಕ್ಕೆ ಒಕ್ಕುವದು. ಆದರೆ ಯಾರಿಗೂ ಅಧಿಕಾರ ದಾನ ಮಾಡಲಿಕ್ಕೆ ಬರುವದಿಲ್ಲ. ಭಾವೀ ರಾಜ್ಯಘಟನೆಯು ಮೂಲ ಧೋರಣತತ್ವಗಳನ್ನಷ್ಟೇ ತೋರಿಸುವದಾಗಿರುತ್ತದೆ.

ಹೊಸ ರಾಜ್ಯ ಘಟನೆಯು ಸಂಯುಕ್ತ ಹಿಂದುಸ್ಥಾನವಾಗಬೇಕೆಂದು ನಾವೆಲ್ಲರೂ ಕೂಡಿ ಏರ್ಪಾಡು ಮಾಡಿದ್ದೇವೆ. ಪೊದಮೊದಲು ಈ ಘಟನೆಯನ್ನು ಕುರಿತು ನಮಗೆ ಸಂಶಯ ಉಂಟಾಗಿತ್ತು. ಸಂಸ್ಥಾನಿಕರು * ಸಂಶಯದ ನಿವಾರಣೆ ಮಾಡಿ, ಈ ವಿಚಾರಕ್ಕೆ ಮೂರ್ತಸ್ವರೂಪವನ್ನುಂಟು ಮಾಡಿ ಕೊಟ್ಟಿದ್ದಾರೆ.

ಹೊಸ ರಾಜ್ಯ ಘಟನೆಯಲ್ಲಿ ಸುರಕ್ಷಿತೆಯ ಮೂರು ಪ್ರಕಾರಗಳನ್ನು ಗೊತ್ತು ಮಾಡಿದ್ದಾರೆ. ಸುರಕ್ಷಿತೆ, ಸುರಕ್ಷಿತೆ ಎಂಬ ಶಬ್ದವು ನನಗೆ ಅಸಹ್ಯವೆನಿಸಿದೆ. ರಾಜಕೀಯ ಮತ್ತು ಆರ್ಥಿಕ ದೃಷ್ಟಿಯಿಂದಲೂ ತಲೆಚಿಟ್ಟು ಮಾಡಿಬಿಟ್ಟಿದೆ. ಈ ಶಬ್ದವು ಜನರ ಮನಸ್ಸಿನಲ್ಲಿ ಸಂಶಯವನ್ನುಂಟು ಮಾಡಿದೆ. ಆದರೂ ಅನಿವಾರ್ಯವಾಗಿ ಈ ಶಬ್ದದ ಉಪಯೋಗ ಮಾಡಬೇಕಾಗಿರುತ್ತದೆ. ಈ ಮೂರು ಪ್ರಕಾರಗಳಾವವೆಂದರೆ –

೧ ಗವ್ಹರ್ನರ, ಗೆವ್ಹರ್ನರ ಜನರಲ ಮತ್ತು ಬಾದಶಹರು ಕಾದಿಟ್ಟುಕೊಳ್ಳುವ ಅಧಿಕಾರಗಳು

೨ ಸಾಲ ಮಟ್ಟಿಸುವದು, ಸರಕಾರೀ ಕಾಮದಾರರ ಸುರಕ್ಷಿತೆ ಹಾಗು ಜಗತ್ತಿನಲ್ಲಿ ಹಿಂದುಸ್ಥಾನದ ಪತ್ತು ಉಳಿಯುವದಕ್ಕಾಗಿ ಭಾರತ ಮಂತ್ರಿಯು ಕಾದಿಟ್ಟುಕೊಳ್ಳುವ ಅಧಿಕಾರ

೩ ಅಲ್ಪಸಂಖ್ಯಾಕರಿಗಾಗಿ ಸುರಕ್ಷಿತೆ–

ಇವುಗಳಲ್ಲಿ ಮೊದಲನೆಯದು ರಾಜಕೀಯ, ಎರಡನೆಯದು ನೈತಿಕ ಮತ್ತು ಮೂರನೆಯದು ಜಾತಿಯ ವಿಷಯವಾದದ್ದಿರುತ್ತದೆ. ರಾಜಕೀಯ ವಿಷಯದಲ್ಲಿ ನೀವು ಸಹ ಸುರಕ್ಷಿತೆಯ ಕಲಮು ಹಾಕಬಹುದು. ಎರಡನೆಯದರಲ್ಲಿ ನನಗೆ ದ್ವಯ್ಯದಾತೆಯುಂಟೆಂದು ತಿಳಿಯದೇಡಿರಿ. ಜಾತಿಗಳಲ್ಲಿ ಏಕ್ಯವನ್ನುಂಟುಮಾಡುವರು ನಿಮ್ಮ ಸ್ಥೈರ್ಯದೃಷ್ಟಿಯಿಂದಲೇ ಅವಶ್ಯಕವಾಗಿರುತ್ತವೆ.

ನಿಧೋಪ ಕೊಡುವಾಗ ಭಾಷಣ.

—(೦)—

ಮೆ. ಮ್ಯಾಕಡೋನಾಲ್ಡ ಸಾಹೇಬರು ಪ್ರತಿನಿಧಿಗಳಿಗೆ ನಿರೋಪ ಕೊಡುವಾಗ ಮಾಡಿದ ಭಾಷಣ

ನಾವೂ ನೀವೂ ಹತ್ತು ವಾರಗಳವರೆಗೆ ಒಂದೆಡೆಯಲ್ಲಿ ಕೂತು ಪರಸ್ಪರ ಪ್ರೀತಿಯಿಂದ ಕಾಲ ಕಳೆದಿದ್ದನ್ನು ನಾವಾರೂ ಮರೆಯಲಾರೆವು. ನೀವು ಹಿಂದುಸ್ಥಾನಕ್ಕೆ ತಿರಿಗಿ ಹೋದ ಬಳಿಕ ಇಂಗ್ಲಂಡದ ಜನರಲ್ಲಿ ನಮ್ಮ ವಿಷಯವಾಗಿ ಪ್ರೀತಿಯುಳಿಯುವದೆಂದು ಸರಸಪ್ರಸಾಹೇಬರು ಉದ್ಗಾರ ತೆಗೆದಿದ್ದರು. ಈ ಪ್ರಕಾರ ಎಲ್ಲ ಹಿಂದೀ ಪ್ರತಿನಿಧಿಗಳ ವಿಚಾರವಾಗುವದೆಂದು ಮಂತ್ರಿಯವರು ಅಂದು– ನಿಮ್ಮಂತೆ ಹಿಂದೀ ಪ್ರತಿನಿಧಿಗಳು ತಮ್ಮ ದೇಶಕ್ಕೆ ತಿರಿಗಿ ಹೋದ ಬಳಿಕ ಬ್ರಿಟಿಷ ಜನರ ವಿಷಯವಾಗಿ ತಮ್ಮ ಅಂತಃಕರಣದಲ್ಲಿ ಪ್ರೀತಿಯನ್ನಿಟ್ಟುಕೊಂಡೇ ಹೋಗುವರೆಂದು ನಂಬಿದ್ದೇನೆ. ಹಿಂದೀ ಪ್ರತಿನಿಧಿಗಳು ಇಂಗ್ಲಂಡಕ್ಕೆ ಬಂದು, ತಮ್ಮ ದೇಶದ ಮಟ್ಟಿಗೆಯಲ್ಲದೆ, ಹಿಂದುಸ್ಥಾನ ಮತ್ತು ಬ್ರಿಟಿಶ ರಾಷ್ಟ್ರದ ಐಮೂಲ್ಯ ಸೇವೆ ಮಾಡಿದಾರೆ. ಈ ಮುಂದೆ ಪಾರ್ಲಮೆಂಟ ಸಭೆಯಲ್ಲಿ ಮಂಜೂರಾಗುವಂಥ ಭಾವೀ ರಾಜ್ಯಘಟನೆಯ ಬಗ್ಗೆ ನಮಗೆ ಸಹಾಯ ವಾಡಿದ್ದೀರಿ. ಬ್ರಿಟಿಶ ಸಾಮ್ರಾಜ್ಯದೊಳಗಿನ ದೇರೆ ವಸಾಹತುಗಳಂತೆ ಹಿಂದುಸ್ಥಾನಕ್ಕೆ ಜವಾಬದಾರ ರಾಜ್ಯಾಧಿಕಾರ ದೊರೆತು, ನಮ್ಮೀರ್ವರ ಸಹಕಾರ ಮುಮ್ಮು ಪ್ರಯತ್ನದ ಉಪಯೋಗದವಾಗುವದೆಂದು ನಂಬಿದ್ದೇನೆ.

ಈ ವೇರೆಗೆ ಮಂತ್ರಿಯವರ ಬಾಯಿಯಿಂದ ವಸಾಹತಿನ ಸ್ವರಾಜ್ಯವೆಂಬ ಹೆಸರು ತೀರ ಕೊನೆಯಲ್ಲಿ ಸಹ ಹೊಂಡದೆ, ಬರೆ ಸೆಲ್ಫ ಗವ್ಹರ್ನಮೆಂಟೆಂಬದೇ ಹೊರಬಿತ್ತು.

ರಾವ್ಹಂಡ ಟೇಬಲಿನ ಕೊನೆಯ ನೋಟ.

—(‡)‡‡(‡)—

ಮೆ. ಮ್ಯಾಕಡೋನಾಲ್ಡ ಸಾಹೇಬರು ರಾವ್ಹಂಡ ಟೇಬಲದ ಭರತವಾಕ್ಯ ಹೇಳುವಾಗ ಕೂಡ ನೋಟವು ಅಸದೃಶ್ಯವಾಗಿತ್ತು. ಸಾಹೇಬರು ಬರುವ ಪೂರ್ವದಲ್ಲಿ ಇಬ್ಬರು ಕಂಠಾಳಿಕರು ಹೆಡೆಯಲ್ಲಿ ಎಲ್ಲ ಹಿಂದೂ ಮುಸಲವಾನ ಮತ್ತು ಇತರ ಪ್ರತಿನಿಧಿಗಳು ತಮಗೆ ಬೇಕಾದಲ್ಲಿ ಕೂತುಕೊಂಡಿದ್ದರು. ತಳೆಯ ವೇಲಿನ ರುಮಾಲು ಮುಂಡಾಸಗಳ ಹೊರತು ಇದರ ಉಡಿಗೆಯು ಯುರೋಪಿಯನ್ನವಾಗಿತ್ತು. ಸ್ತ್ರೀ ಮೆಂಬರರು ಜರತಾರಿ ಕಿರಮಂಜಿ ಬಣ್ಣದ ಸೀರೆಗಳನ್ನುಟ್ಟಿದ್ದರು. ಪ್ರಧಾನರು ಬರುವತನಕ, ಮೆಂಬರರು ಸಿಗರೆಟ್ಟು ಸೆದುತ್ತ ಪೆತ್ತುಗಳೆಯುತ್ತಿದ್ದರು. ಸಾಹೇಬರು ಒಂದು ಬೆಲ್ಲ ಬೆಜ್ಜವುದ್ದ ಮತ್ತು ಆರ್ಡ ಸಾಂಕೆಯನ್ನು ಸಹವೆ ಕೂಡುಕೊಂಡರು. ವರ್ತಮಾನಪತ್ರಗಳ ವರ್ತಮಾನರು ರಿಪೋರ್ಟರರು ಬಂದಿದ್ದರು. ಇವರೆಲ್ಲರಿಗೂ ಭಾಷಣದ ಪ್ರತಿಗಳನ್ನು ಹಂಚಿದರು. ಸಾಹೇಬರ ಭಾಷಣವನ್ನು ಬಂದು ತಾಸಿನ ತನಕ ನಡೆಯಿತು. ಸರಸಾಯವನ್ನೂರ ಹೆಸರು ಮತ್ತು ಅವರ ಕಮೀಶನವು ಉತ್ತಾರವಾದಾಗೆಲ್ಲ ಹಿಂದೀ ಮೆಂಬರರು ನಕ್ಕು ಉಪಹಾಸ ಮಾಡಿದರು. ಸ್ವರಾಜ್ಯ, ಜವಾಬದಾರ ಆತಳಿತೆ ಎಂಬ ಶಬ್ದಗಳು ಬಂದಾಗ ಆನಂದಸ್ಫೋರ್ತನೆ ಮಾಡಿದರು. ಭಾಷಣ ಮುಗಿದ ಕೂಡಲೆ, ಎಲ್ಲರೂ ಒಮ್ಮತವಾಗಿ ಆನಂದಘೋಷ ಮಾಡಿದರು. ಹಿಂದೀ ಪ್ರತಿನಿಧಿಗಳ ಪರವಿಯಿಂದ ಕೂಡಲೆ ಬಾಡಶಹರ ಅಭಾರವನ್ನಿಸುವ ಠರಾವು ಪಾಸ ಮಾಡಲ್ಪಟ್ಟಿತು. ಇದಕ್ಕೆ ಉತ್ತರವಾಗಿ ಬಾದಶಹರಿಂದ ಸಮ್ಮತಿಸೂಚಕ ಉತ್ತರ ಬಂತು. ಬಾದಶಹರು ಸಹೋದರಿಯ ಮೃತ್ಯುವಿನ ದೆಸೆಯಿಂದ ದುಃಖದಲ್ಲಿರುವರು. ಇಲ್ಲವಾದರೆ– ಇವರು ರಾವ್ಹಂಡ ಟೇಬಲಿನಲ್ಲಿ ಇದಕ್ಕೂ ಹೆಚ್ಚು ಆಸಕ್ತಿಯನ್ನು ತೋರಿಸುವ ಬಹುದಾಗಿತ್ತೆಂದು ಉದ್ಗಾರ ತೆಗೆದರು.

ಬಳಿಕ ಮಹಾದ್ವಾರದಲ್ಲಿ ಕಾದುಕೊಂಡಿದ್ದ ಸೈನಿಕರು ಬ್ಯಾಂಡಿನಿಂದ ಇಂಗ್ಲೀಜಿ ರಾಷ್ಟ್ರಗೀತ ಹಾಡಿದ ನಂತರ ಸಭೆಯು ವಿಸರ್ಜನೆಯಾಯಿತು. ಪ್ರತಿನಿಧಿಗಳಲ್ಲಿ ಕೆಲವರು ಈಗಾಗಲೆ ಹೊಂಟಿರುವರು. ಉಳಿದವರು ತಂತಮ್ಮ ಅನುಕೂಲತೆಯ ಪ್ರಕಾರ ಈ ವಾರದಲ್ಲಿ ಹೊರಡುವರು.

ರಾಮುಂಡ ಟೇಬಲಿನವರು ಹಿಂದುಸ್ಥಾನಕ್ಕೆ ಬಂದ ನಂತರ ಆಗತಕ್ಕ ಕೆಲಸಗಳು.

೧ ಬ್ರಹ್ಮದೇಶವು ಸ್ವತಂತ್ರವಾಗಬೇಕೆ? ಆಗಬಾರದೆ ಎಂಬ ವಿಷಯವಾಗಿ ಹಿಂದು ಆಮೀಟಿಯು ನೇಮಿಸಲ್ಪಡುವದು.

೨ ಇದೇ ಪ್ರಕಾರ ಸಿಂಧಪ್ರಾಂತದ ವಿಷಯಿಂದಲೂ ಹಿಂದು ಕಮೀಟಿ ನೇಮಿಸಲ್ಪಡುವದು.

೩ ಹಿಂದುಸ್ಥಾನದಲ್ಲಿ ಯಿಂದಿನ ಕಾಲೇಜು ಸ್ಥಾಪಿಸುವ ಯೋಜನೆಯು ತೀವ್ರವಾಗಿ ಕೈಕೊಳ್ಳಲ್ಪಡುವದು.

೪ ಈಗಿರುವ ಕಾಯದೆಗಳ ಮೇರೆಗೆ ರಾಜ್ಯಕಾರಭಾರದಲ್ಲಿ ಮಾಡಬೇಕಾದ ಸುಧಾರಣೆಗಳಲ್ಲಿ ಶೀಘ್ರವಾದ ಬದಲಾವಣೆ ಮಾಡುವದು.

೫ ಸಂಸ್ಥಾನಿಕರು ತಮ್ಮ ಯಾವ ಯಾವ ಖಾತೆಗಳನ್ನು ಸಂಯುಕ್ತ ಸರಕಾರಕ್ಕೆ ಒಪ್ಪಿಸಬಹುದು; ಅವುಗಳ ಮಟ್ಟಿಗೆ ಸಾರ್ವಭೌಮ ಸರಕಾರದ ಅಧಿಕಾರ ನಡೆಯುವದು.

೬ ಹೊಸ ರಾಜ್ಯಘಟನೆಯನ್ನು ಬರೆಯುವ ಕೆಲಸವನ್ನು ನೌಕರಶಾಹಿಗೆ ಹೇಳುವದಿಲ್ಲ. ರಾಜಕಾರಣಪಟುಗಳು ಅವರ ನೆರವು ತಕ್ಕೊಂಡು ಮಾಡಬಕ್ಕದ್ದು.

೭ ಅದು ಹೀಗೇ ಆಗತೆಂದು ಇಂದು ಹೇಳಲಿಕ್ಕೆ ಬರುವದಿಲ್ಲ. ಹೊಸ ಗವರ್ನರಜನರಲ್ಲರಾದ ಲಾರ್ಡ ವಿಲಿಂಗಡನ್ನ ಸಾಹೇಬರ ಆಲೋಚನೆ ಕೇಲಾಗುವದು.

ನಗರಶಿಂಗನ ಪೆನೆಯಿಂದ ಗದಗಿನಲ್ಲಿ ಹರತಾಳ.

—(೭)—

ಸರದಾರ ಭಗತಶಿಂಗನನ್ನು ಯಾರವಡೆಗೆ ತಂದು ಫ್ರತಿಕನ್ನು ಗಲ್ಲೇಗೇರಿಸಿದರೆಂಬ ಸುಳ್ಳು ಸುದ್ದಿಯು ಗದಿಗ್ಗೆ ಹೋದ ಕೂಡಲೆ- ವಿದ್ಯಾರ್ಥಿಗಳು ಶಾಲೆಗೆ ಶರಣು ಹೊಡೆದು, ಬೊಳ್ಳನೆತ್ತೆಯ ಮೆರವಣಿಗೆ ತೆಗೆದರು. ಅಂಗಡಿಕಾರರು ಹರತಾಳ ಮಾಡಿದರು. ಸಾಯಂಕಾಲದಲ್ಲಿ ಪುರಜನರ ದುಃಖವನ್ನು ಪ್ರಕಟ ಮಾಡ್ಯನತ್ತೆಯ ಮೆರವಣಿಗೆ ಹೊರಟ್ಟು, ಸಭೆ ಭರ್ತಾಗಿ, ದುಃಖಪ್ರದರ್ಶನ ಮಾಡಲ್ಪಟ್ಟಿತು.

ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಿರಿ

—(೦)—

ನಾಮದಾರ ಶಾಸ್ತ್ರಿಯವರ ಹೇಳಿಕೆ

—(೦)—

ಪಾರ್ಲಮೆಂಟ ಸಭೆಯಲ್ಲಿ ಲಿಬರಲ ಬಣದವರು ಹಿಂದೀ ಪ್ರತಿನಿಧಿಗಳಿಗೆ ವೀಜವಾನಿ ಮಾಡಿಸಿದರು. ಆಗ ನಾಮದಾರ ಶ್ರೀನಿವಾಸ ಶಾಸ್ತ್ರಿಯವರು ರಾಜಕೀಯ ಕೈದಿಗಳನ್ನು ಬಂಧಮುಕ್ತ ಮಾಡಿರಿ. ೩೦ ಸಾವಿರ ಜನರು ತುರಂಗಗಳಲ್ಲಿ ಕೊಳೆಯುತ್ತಿದ್ದಾರೆನ್ನಲು – ಒಬ್ಬರು ಮಾತ್ರವಲ್ಲ; ಅರವತ್ತೆಂದು ಅಂದರು. ಶಾಸ್ತ್ರಿಗಳು ಈ ತಿದ್ದು ಪಡೆಯನ್ನು ಕೃತಜ್ಞತೆಯಿಂದ ಮನ್ನಿಸಿ, ಪರಿಷತ್ತಿನ ಯಶವು ಕಾಹೀಮವಾಗಿ ಉಳಿಯಬೇಕಾದರೆ- ಎಲ್ಲ ರಾಜಕೀಯ ಕೈದಿಗಳನ್ನು ಈ ಕ್ಷಣವೇ ಬಿಡಬೇಕು ಮತ್ತು ತುರಂಗದಿಂದ ಬಿಟ್ಟು ಬರುವ ಮುಂದಾಳುಗಳ ಕೂಡ ವಿಚಾರವಿನಿಮಯ ಮಾಡಬೇಕು. ಇಷ್ಟಾದನಂತರವೇ ಭಾವೀ ರಾಜ್ಯಘಟನೆಯನ್ನು ಅಮಲಿನಲ್ಲಿ ತರಬೇಕು. ಈ ಮಧ್ಯಕಾಲದಲ್ಲಿ ಕೆಲವು ದಿವಸ ವಿಕ್ಕಟ್ಟಿನ ಪರಿಸ್ಥಿತಿಯುಂಟಾದರೂ, ಸರಕಾರವು ಅದನ್ನು ಸಹನ ಮಾಡಬೇಕು.

ಬ್ರಿಟಿಕ ಸಾಮ್ರಾಜ್ಯವಲ್ಲ;

—(೦)—

ಸ್ವತಂತ್ರ ರಾಷ್ಟ್ರಗಳ ಸಂಘ.

—೦*೦—

ನಾಮದಾರ ಶಾಸ್ತ್ರಿಯವರ ನೆತಂರ ಇಂಗ್ಲಂಡದ ಮುಖ್ಯ ಪ್ರಧಾನರಾಗಿದ್ದ ಮೆ. ಲಾಯಿಡಜಾರ್ಜ ಸಾಹೇಬರು ಭಾಷಣ ಮಾಡುವಾಗ-

ಈ ನಂತರ ಬ್ರಿಟಿಶ ಸಾಮ್ರಾಜ್ಯವೆಂಬ ಹೆಸರಿಡಪಿ, ಸ್ವತಂತ್ರ ರಾಷ್ಟ್ರಗಳ ಒಂದು ಸಂಘನೆಂದು ಹೆಸರಿಡುವದು ಸಾರ್ಥಕವಾಗುವದು. ಎಂದು ಉದ್ಗಾರ ತೆಗೆದರು.

ಅಹಮ್ಮದನಗರದಲ್ಲಿ ಸ್ವದೇಶಿ ವಸ್ತುಗಳ ಪ್ರದರ್ಶನ ಕೂಡತಕ್ಕದ್ದಿದ್ದು, ಆ ಕಾಲಕ್ಕೆ ಹಿಂದೇ ಪೇಳೆಯಲ್ಲಿ ಆರು ಎಳೆಗಳು ಹೊರಡುವಂಥ ರಾಟೆಯು ಬಂದಿರುತ್ತದೆ.

ಪಂಡಿತ ಮಾಲವಿಯಾಜಿಯವರಿಗೆ ಇನ್ನೂ ಒಂದು ತಿಂಗಳ ವಿಶ್ರಾಂತಿ ಬೇಕೆಂದು ಡಾಕ್ಟರರು ಅಧಿಪ್ರಾಯಪಟ್ಟಿದ್ದಾರೆ.

ಅಸೆಂಬ್ಲಿಯಲ್ಲಿ

ಸ್ಪೇಶಲ ವಿಚಾರ.

ಅಸೆಂಬ್ಲಿಯಲ್ಲಿರುವ ರಾಷ್ಟ್ರೀಯ ಮತ್ತು ಸ್ವತಂತ್ರ ಪಕ್ಷದವರಿಗೆ ಹೊಸ ಸ್ವರಾಜ್ಯದ ಜಾಹೀರ ನಾಮೆಯಲ್ಲಿ ಮಹತ್ವವೇನೂ ಕಂಡಿಲ್ಲ. ಆದುದರಿಂದ ಇವರು ಈ ವಿಷಯ ವಿಚಾರ ಮಾಡಲು ಅಸೆಂಬ್ಲಿಯಲ್ಲಿ ಸ್ಪೇಶಲ ವಿಚಾರವಾಗಬೇಕೆಂಬ ತರಾವನ್ನು ತರಬೇಕೆಂಬ ವಿಚಾರ ನಡೆಸಿದ್ದಾರೆ.

ಬೆಳಗಾವಿಯಲ್ಲಿ ಕಾಯದೆಭಂಗದ ಉಗ್ರಗು ಹೆಚ್ಚಿತು.

—(೦) —

ಬೆಳಗಾವಿಯಲ್ಲಿ ಶ್ರೀ ಧನಶೆಟ್ಟಿ ಮಲ್ಲಪ್ಪನವರಿಗೆ ತಿಲಾಂಜಲಿ ಕೊಡಲೋಸುಗ ದೊಡ್ಡ ಮೆರವಣಿಗೆ ಹೊರಡುವದೆಂಬ ವರ್ತಮಾನ ಕೇಳಿ, ಆ ಕೃತ್ಯಕ್ಕೆ ಕಲೆಕ್ಟರರಾದ ಮೆ. ಹಿರೇಮಸಾಹೇಬರು ಮತ್ತೆ ಸಭಾಬಂದಿಯ ಹುಕುಮು ತೆಗೆದರು. ನಾಗರಿಕರು ಪೋಲಿಸರ ಕೂಡ ಗುದ್ಯಾಡಬೇಕೆಂದು ಮುನಸಿವಾಲಿಟಿಯು ಪದ್ದಿನ ಹೊರಗೆ ಬಿಡೆ ಮಾಡಿದರು. ಆದರೂ ಅಲ್ಲಿ ೪೦೦ ಅರಬ್ಬಿ ಪೋಲಿಸ ಹಾಗು ಒಂದಾಕಿನ ಬೇರೆ ಪೋಲಿಸರನ್ನು ಕಾವಲಿಟ್ಟರು. ಹನ್ನೆರಡು ಜನರನ್ನು ಹಿಡಿದಿದ್ದಾರೆ.

ಪೋಲಿಸರು ಇಂಥ ಸಭೆಗಳನ್ನು ನುಮ್ಮಸೆ ಮಾಡಗೊಡಬೇಕು. ಅಂದರೆ ತಮ್ಮ ಅವಶ್ಯಕತೆ ಇಲ್ಲದೆ, ಎಲ್ಲ ಕೆಲಸಗಳು ಶಾಂತ ರೀತಿಯಿಂದ ನಡೆಯುವಂತೆ ಕಂಡು ಬರುವದು. ಪೋಲಿಸರು ಉಗ್ರರೂಪ ಧಾರಣ ಮಾಡುವರೆಂದರೆ- ತಾವಾಗಿ ಕಾಯದೆಭಂಗದ ಉರಿಯು ಹೆಚ್ಚಾಗುವಂತೆ ಉತ್ತೇಜನ ಕೊಟ್ಟಂತಾಗುತ್ತದೆ.

ಅಖಿಲಾಖಂಡದ ಅಖಿಲ ಸ್ತ್ರೀಯರ ಪರಿಷತ್ತು.

ಅಹೋರಿನಲ್ಲಿ ಅಖಿಲ ಅಖಿಯಾಖಂಡದ ಸ್ತ್ರೀಯರ ಪರಿಷತ್ತು ಕೂಡಿದೆ. ದೇವಿ ಸರೋಜನಿಯವರು ತುರಂಗದಲ್ಲಿದ್ದರೂ, ಅವರ ಗೌರವಕ್ಕಾಗಿ ಅವರನ್ನೇ ಅಧ್ಯಕ್ಷರಾಗಿ ಆರಿಸಿದರು. ದಿನಾಲು ಒಬ್ಬರು ಅಧ್ಯಕ್ಷರಾಗಿ ಕೆಲಸ ಮಾಡುವರು. ಅವರು-

೧ ಲಂಕೆಯ ಲೇಡಿ ಬಂದಾನಾಯಕ ೨ ಕು ಮಾರಿ ನಿಂಬವುಂಗ-ಬ್ರಹ್ಮದೇಶ ೩ ಮಡ್ಯಾಮ ಹೋಶಿ ಜಪಾನ ೪ ಕುಮಾರಿ ಕಮಲಾದ್ವೀನ ಕಾಮೂಲ ೫ ಡಾಕ್ಟರ ಮುತ್ತುಲಕ್ಷ್ಮಿರೆಡ್ಡಿ ಹಿಂದುಸ್ಥಾನ ೬ ಶ್ರೀ ಸೌ॥ ಘೂಜದಾರ ಇರಾಣ

ಪ್ರೇಪ್ರೆಸ ಪತ್ರವು ಸಿಂಹನಾದ ಮಾಡಿದೆ. ಸ್ವಾಕ ಮತ್ತು ಶೇರ್ಸಗಳ ವ್ಯಾಪಾರದಲ್ಲಿ ತೇಜಿಯಾಗುವ ದರ ಬದಲು ಮಂದಿಯಾಗಿ, ಧಾರಣೆಯು ಇಳಿದು ಹೋಯಿತು.

ಹಾಂಸಭಾವಿಯಲ್ಲಿ

ಕೋಡ ತಾಲೂಕಿನ ರೈತರ ಪರಿಷತ್ತು

—(೧)—

ನಾಳಿನ ದಿವಸ ಹಿರೇಕೆರೂರ ತಾಲೂಕಿನ ರೈತರ ಪರಿಷತ್ತು ಹಾಂಸಭಾವಿಯಲ್ಲಿ ಸೇರುವದು. ಹುಬ್ಬಳ್ಳಿಯ ವಕೀಲರಾದ ಶ್ರೀ. ಶಿದ್ದರಾಮಪ್ಪಾ ಮೈಟಿಯವರು ಅಧ್ಯಕ್ಷ ಹಾಗು ಶ್ರೀ ಗದಿಗೆ ಪ್ಪಾ ಗುಎ.ಶಾಂತವ್ಪಾ ಶಿವಪೂಜಿ ಕಡಿಡಿ ಇವರು ಸ್ವಾಗತಾಧ್ಯಕ್ಷರಾಗಿದ್ದಾರೆ. ರೈತರ ಪ್ರಕೃತದ ಶೋಚನೀಯ ಅವಸ್ಥೆಯನ್ನು ಕುರಿತು ಎಲ್ಲಾ ಕಡೆಯಲ್ಲಿಯೂ ಸಭೆಗಳಾಗುತ್ತಿರುವಂತೆ ಈ ಪರಿಷತ್ತು ಆಗಿದೆ. ಇಮ್ಮ ಪರಿಷತ್ತಿನ ಉದ್ದೇಶವನ್ನು ಶಂಪು ಸ್ವಾಗತಾಧ್ಯಕ್ಷರು ಮುಂದೆ ಕೊಟ್ಟಂತೆ ಕಾರಣ ಗಳನ್ನು ಹೇಳುತ್ತಾರೆ.

ಬರಗಾಲ, ಕಾಳುಕಡಿಗಳ ಅಗ್ಗಳತೆ, ಮಂದ ವ್ಯಾಪಾರ, ದೇಶದಲ್ಲಿ ಅಸ್ವಸ್ಥತೆ ಮುಂತಾದ ಕಾರಣಗಳಿಂದ ಮೊದಲೇ ನಷ್ಟಗಿಲ್ಲದ ಒಕ್ಕಲಿಗರ ಸ್ಥಿತಿಯು ಈಗ ಹೆಚ್ಚು ಕೆಟ್ಟಿರುವದು. ಅದನ್ನು ವಿಚಾರಿಸಿ ಒಕ್ಕಲಿಗರ ಕವ್ವಮಯ ಸ್ಥಿತಿಯನ್ನು ಸುಧಾರಿಸುವ ದೆಸೆಯಿಂದ ಯೋಗ್ಯವಾದ ಕಾರ್ಯ ಕ್ರಮವನ್ನು ಗೊತ್ತು ಪಡಿಸುವದಕ್ಕೋಸ್ಕರ ಕೋದ ತಾಲೂಕಿನೊಳಗಿನ ಒಕ್ಕಲಿಗರ ಸಭೆಯು ನಾಳಿನ ಬರುವ ಆದಿತ್ಯವಾರ ದಿವಸ ಕೂಡುವದಿದೆ ಸಭೆಗೆ ಧಾರವಾಡ ಬೆಳಗಾಂವ ಮತ್ತು ಎಲ್ಲ ತಾಲೂಕಗಳಿಂದ ಒಕ್ಕಲಿಗರ ಹಿತಚಿಂತಕರೂ ಮತ್ತು ಹಗಲಿರಳು ಒಕ್ಕಲಿಗರ ಸೇವೆಯಾಗಿ ಶ್ರಮ ಮಾಡುತ್ತಿರುವ ಅನೇಕ ಮಹನೀಯರೂ ದಯಮಾಡಿಸುವರು. ಆ ವೇಳೆಗೆ ಎಲ್ಲರೂ ಬಂದು ಈ ಸುಸಂಧಿಯ ಸದುಪಯೋಗವನ್ನು ಮಾಡಿಕೊಳ್ಳಬೇಕೆಂದು ತಾಲಕರ ವಿನಂತಿ

ಬೆಳಗಾವಿಯ ತಂಬ ಪೋಲಿಸರ ಹಾಗು ಕಿಜನೇರ ಪೋಲಿಸರ ಹಾವಳಿ ಹಚ್ಚಾಗಿದೆ. ಅವರಿಗೇ ಊರಿನ ಎಲ್ಲ ವ್ಯವಸ್ಥೆಯನ್ನು ಒಪ್ಪಿಸಿದಂತೆ ತೋರುತ್ತದೆ. ಅವರು ಹುಡುಗಟ್ಟಿ, ಯಾವದೊಂದು ಮೋಟಾರಿನಲ್ಲಿ ಕುಳಿತುಕೊಂಡು ಊರೊಳಗೆ ಎಲ್ಲ ಚಿಕ್ಕ ದೊಡ್ಡ ಬೀದಿಗಳಲ್ಲಿಯೂ, ವಿಜಯನಗರದಲ್ಲಿಯೂ ಜನರನ್ನು ಹೆದರಿಸುತ್ತಾ ಯಾವಾಗಲು ತಿರುಗುತ್ತಿರುತ್ತಾರೆಂದು ಸಂಯುಕ್ತ ಕರ್ನಾಟಕದಲ್ಲಿ ಬರೆದಿರುತ್ತದೆ. ಬೆಳಗಾವಿಯ ಪೋಲಿಸರು ಧಾರವಾಡದ ಪೋಲಿಸರಂತೆ ಶಾಂತಿಸಮಧಾನದ ವಸ್ತುವಾರ ಕಲಿಂದೆ. ಅಲ್ಲಿ ಇಷ್ಟೊಂದು ಉಲ್ಬಣವೇ ಆಗ

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ

(ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ)

ಹೂಳಮಡಿ

ಮತ್ತು ———— ಧಾರವಾಡ

ಕಾಮನಕಟ್ಟಿ

ನಮ್ಮಲ್ಲಿಇದಿ ಕರ್ನಾಟಕದಲ್ಲಿ ಆಚ್ಚಾಗಿರುವ ಎಲ್ಲ ಬಗೆಯ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಮಿದೆ ಸಹ) ನಕಾಶೆ ಜ ಗಳೂ ಬರವಣ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುವವು. ಭಾಂಡಾರದ ಬೆಲೆಪಟ್ಟಿ ಬೇಕಾದವ ಾಣೆ ಅಂಚೆ ತಿಕೀಟುಗಳನ್ನು ಕಳಿಸಿ ಬರೆಯಬೇಕು. ವ್ಯಾಪಾರಕ್ಕೆ ರಿಯಾಯಿತಿ ಯುಂಟು. ಮಾದರಿಗಾಗಿ ಈ ಕೆಳಗೆ ಕೆಲವು ಹೆಸರು ಕೊಟ್ಟಿದ್ದೇವೆ.

೧. ಕರ್ನಾಟಕ ಕ ... ಸಂ. ೧,೨ಸಂಪುತ ಗಳಕ್ಕೆ	೨– ೪–೦
೨. ಕಥೆಗಳನ್ನೊ ... ದಬಲ್ಲ ಚರಿತ್ರೆ, ಸಚಿತ್ರ	೧– ೬–೦
೩. ಧರ್ಮಪತಿ ಸಂ... ಜ	೨–೦೮–೦
೪. ಕನ್ನ ... ಚರ ... ನ	೧ ೦–೦
೫. ಪದ್ಯ ... ಸಂಗ್ರ ...	೪–೦–೦
೬. ಕಥಾ ... ... ಯಾಗ ಸಂಪುಟಗಳು	೧೪–೮ ೦
೭. ... ... ಸಂಸ	೨– ೦–೦
೮. ... ... ಗಿ	೧೬–೦–೦
೯. ... ... ಪ್ರತಿ ಗಳಕ್ಕೆ	೧– ೦–೦
೧೦.	೨–೦೯–೦
೧೧.	೨–೦೩–೦
೧೨. ... ... ನಿರ್ಣಾಪೇಕ್ಷಯ ಪತ್ರಿಗಳಕ್ಕೆ	೯–೧೦–೦
೧೩. ಲಿಂಗಾಯತ ... ಸಂ. ೧,೨,	೨– ೪–೦
೧೪. ಪಾರ್ವತಿ ಸಂಪೂರ್ಣ	೧–೧೦–೦

ಶ್ರೀನಾಥ ರಾಮಚಂದ್ರ ಜೋಶಿಪಾಂಡೆ ಬಿ.ಎಸ್ಸಿ.

ಜೊಲಿಗೆ ಕಲಿಸುವ

ವತ್ಸದಂಥ ಪುಸ್ತಕ

—(೨)—

ಬೆಂ ಸಿಸ್ಟೀಮ ಆಫ ಕಟಿಂಗವೆಂಬ ಅಮೂಲ್ಯವಾದ ಚಿಕ್ಕ ಪುಸ್ತಕವು ಈಗ ತಾನೆ ಮುದ್ರಣ ಹೊಂದಿ, ಮಾರಾಟಕ್ಕೆ ಸಿದ್ಧವಾಗಿದೆ. ಗಂಡಸರು, ಹೆಂಗಸರು ಹುಡುಗರು ಇವರಿಗೆ ಸರಿಯಾಗಿ, ಅಚ್ಚು ಕಟ್ಟಾಗಿ ಎಷ್ಟು ಒಟ್ಟೆ ಬೇಕಾಗುತ್ತದೆಂಬದನ್ನು ಸಶಾಸ್ತ್ರವಾಗಿ ಇದರಲ್ಲಿ ಬರೆದಿರುತ್ತದೆ. ಮತ್ತು ಎಲ್ಲರಿಗೂ ದೇಹರಕ್ಷಣೆಯ ವಿಚಾರವಾಗಿ ಉಡತೊಡಿಗೆ ಮತ್ತು ರಕ್ಷಣೆ ಎಂಬ ಭಾಗವು ಈ ಪುಸ್ತಕದಲ್ಲಿ ಸೇರಿಸಲ್ಪಟ್ಟಿದೆ. ಬೆಲೆ ಮೂರು ರೂಪಾಯಿ, ಅಂಚೆ ಹಾನಿಸಲು ಹೆಚ್ಚಿಗೆ ಎದಾನಿ. ಪ್ರತಿಯೊಂದು ಕುಟುಂಬದವರೂ ಈ ಪುಸ್ತಕದಲ್ಲಿ ಸಂಗ್ರಹದಲ್ಲಿಟ್ಟು ಕೊಳ್ಳಬೇಕು. ಅಂದರೆ ಸಿಂಪಿಗರು ಹೇಳಿದಂತೆ ಹೆಚ್ಚಿಗೆ ಬಟ್ಟೆ ಕೊಟ್ಟು, ಹಣ ಕಳಕೊಳ್ಳುವದು ನಿಸಂದೇಹವಾಗಿ ತಪ್ಪುವದು.

ವಿಳಾಸ— ರಾವ್ಸ ಟೀಲರಿಂಗ ಕಾಲೇಜ.
೧೪೩ ಪ್ರಿನ್ಸೆಸಸ್ಟ್ರೀಟ ಮುಂಬಯಿ (೨)

ಧಾರವಾಡದಲ್ಲಿ

ಅಂಗಡಿ ಮತ್ತು ಬಂಗಲೆಯ ಮಾರಾಟ

)(—(೧)—)(—

ಮ. ನಂ. ೧೫೭೬ ದುಮ್ಮಜಲಿನ ಅಂಗಡಿ ಮಂಗಳವಾರ ಪೇಟ ಜವಳಿ ಓಣಿಯಲ್ಲಿ ಇರೋದೂ ಪುಂಡಲೀಕಪ್ಪ ಜಾಧವ ಇವರು ಬಾಡಿಗೆಯಿಂದ ಇರೋದು.

ಮು. ನಂ. ೭೫೧೧ ಕಿಲ್ಲೆದಲ್ಲಿ ಶ್ರೀ. ಜೋಬಳಿಕರ ಇವರ ಬಂಗ್ಲೋದ ಎದುರಿನಲ್ಲಿ ಮಿ. ಫೆರ್ನಾಂಡಿಸರು ಬಾಡಿಗೆಯಿಂದಿರೋದು.

ಸೂಚನೆ:- ಗ್ರಾಹಕರು ತಾವು ಖರೀದಿಗೆ ತೆಗೆದುಕೊಳ್ಳತಕ್ಕ ಬೆಲೆ ಮತ್ತು ಬೇರೆ ಮಾಹಿತಿಯನ್ನು ಸಂಪಾದಕ ವಿಜಯ ಇವರಿಗೆ ತಿಳಿಸಬೇಕು.

ಈ ಪತ್ರವನ್ನು ಆನ್ವಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾ ಚಾಯ ಮತ್ತು ಬಾಳಾಚಾರ್ಯ ಹೊಸಕೇರಿ.

ವರ್ಷ ೧೩ನೇ ಧಾರವಾಡ ಶನಿವಾರ ತಾರೀಖು ೨೪ ನೇ ಜನೇವರಿ ೧೯೩೧ (ಸಂಚಿಕೆ ೧೯

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ. ಸಿದ್ಧಾರೂಢಸ್ವಾಮಿಯವರ ಮೇಲಿನ ದಾವೆಯ ತೀರ್ಪು.

ಶ್ರೀ ಸಿದ್ಧಾರೂಢಸ್ವಾಮಿಯವರ ಮೇಲಾದ ದಾವೆಯ ತೀರ್ಪನ್ನು ಪುಸ್ತಕರೂಪದಿಂದ ಮುದ್ರಿಸಿ, ಅದನ್ನು ಮಾರಾಟಕ್ಕೆ ಸಿದ್ಧಮಾಡಿದ್ದೇವೆ. ಇದರಲ್ಲಿ ವಾದಿ ಶ್ರೀ ಸಿದ್ಧಾವಧೂತರ ಅರ್ಜಿ, ಶ್ರೀ ಸಿದ್ಧಾರೂಢಸ್ವಾಮಿಗಳ ಕೈಫಿಯತ್ತು ಮತ್ತು ಮುನ್ಸಫರಾದ ಶ್ರೀ. ಸಬನೀಸ ಇವರ ತೀರ್ಪು ಕೊಡಲ್ಪಟ್ಟಿದೆ. ವಾದಿ, ಪ್ರತಿವಾದಿ, ಹಾಗು ಮುನ್ಸಫರು ಭಾವಚಿತ್ರಗಳನ್ನು ಕೊಟ್ಟಿರುತ್ತದೆ. ಪುಸ್ತಕಳ ಜನರ ಆಗ್ರಹದ ಸೂಚನೆಯು ಮೇರೆಗೆ ಈ ಪುಸ್ತಕವನ್ನು ಅಂದಿವಾಗಿ ಮುದ್ರಿಸಿ, ಮಾರಾಟಕ್ಕೆ ಸಿದ್ಧ ಮಾಡಿರುತ್ತದೆ. ಇದರ ಎರಡೇ ಸಾವಿರ ಪ್ರತಿಗಳನ್ನು ತೆಗೆಸಿದೆ. ಪಾವೆಯ ಮಹತ್ವದ ದೃಷ್ಟಿಯಿಂದ ಇಷ್ಟು ಪ್ರತಿಗಳು ತೀರಾ ತುಸುವೆನಿಸಿದವು. ಆದ್ದರಿಂದ ಗ್ರಾಹಕರು ಶೀಘ್ರಮಾಡಬೇಕು.

ಒಂದು ಪುಸ್ತಕದ ಬೆಲೆ ನಾಲ್ಕು ಆಣೆ; ಹತ್ತು ಪ್ರತಿ ತರಿಸಿದವರಿಗೆ ಒಂದು ಪ್ರತಿ ಹೆಚ್ಚಿಗೆ ಕೊಡಲ್ಪಡುವದು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ ಕೊಡಲ್ಪಡುವದು. ಪ್ಲೇ. ಪಿ ಪಿಯು ಕೂಲಿ ಒಂದೆರಡು ಪ್ರತಿಗಳನ್ನು ಬೇಡಿದವರು ಪ್ರತಿಯೊಂದಕ್ಕೆ ಎರಡಾಣೆಯಂತೆ ಪೋಸ್ಟ ಸ್ಟಾಂಪುಗಳನ್ನು ಕಳಿಸಬೇಕು. ಒಕಳಿ ಪ್ರತಿ ಬೇಡುವವರು ಮುಂಗಡ ಮನಿಯಾರ್ಡರ ಮಾಡಬೇಕು. ಪ್ಲೇ. ಪಿ. ಯಿಂದ ತರಿಸಿಕೊಳ್ಳಲಿಚ್ಛಿಸುವವರು ೧/೪ ಹಣವನ್ನು ಮುಂಗಡ ಮನಿಯಾರ್ಡರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ.

ಪಥ್ಯ ಇಲ್ಲ! ಜಂಗಿ ಸುಲಿಗೆ ಪಥ್ಯ ಇಲ್ಲ!!

ಗುಣವಾಗದಿದ್ದರೆ ಹಣ ಜೀರತ!

ಧಾರವಾಡ್ಯಕ, ವೀರ್ಯವರ್ಧಕ, ಕಾಮೋತ್ತೇಜಕವಾದ

ಇಂದ್ರಿಯಸ್ತಂಭನ ಗುಳಿಗೆ.

ಇನಸೋಫಿಯ ಪೀಡೆ ಸಪ್ತಧಾತ್ವಿ, ಪ್ರಕೃತಿ, ಸ್ವಪ್ನ ದೋಷ ಮೊದಲಾದವು ಈ ಗುಳಿಗೆಯ ಸೇವನೆಯಿಂದ [illegible] ಮನೋಕ್ಷೀಣತೆ, [illegible] ಗುಳಿಗೆ ಸೇವಿಸಲಿಕ್ಕೆ ಬರದವರು ಒಕ್ಕೆಗಳು. ಹೆಚ್ಚು [illegible] ಪೂರ್ಣ ಆರೋಗ್ಯವಾಗಿ ಕಾಣಲಿಕ್ಕೆ ನಿರೋಗತ್ವವೂ, ಕಾಂತಿ [illegible] ಗುಳಿಗೆಗಳು ಬೇಕಾಗುತ್ತವೆ ಶಿವಕ್ಕಾ ಒಳಗುಳಿಗೆಗಳಿಗೆ ೪ ರೂ. ಇದನ್ನು ಸೇವಿಸುವದಕ್ಕೆ ಇಂದ್ರಿಯಸ್ತಂಭ ತೈಲವನ್ನು ಉಪಯೋಗಿಸಬೇಕು ಕೆವ್ವತ್ತು ಜಾಟ್ಲಿಗೆ ರೂ ೨-೮-೦ ಅನುಪಾನ ಪತ್ರಿಕೆ. ಔಷಧದ ಸಂ. [illegible]

ವಿ ಸೂಚನೆ:— ಮೇಲಿನ ಔಷಧಗಳನ್ನು ೨೫ ರೂಪಾಯಿಗೆ ತರಿಸಿಕೊಂಡವರಿಗೆ ೧೫ ರೂಪಾಯಿ ಕಿಮ್ಮತ್ತಿನ ಔಷಧಗಳನ್ನು ಇನಾಂ ಕೊಡುವೆವು. ಆನ ಕೈಕದು ಕ್ವರೆ ಮಾತಾಲಿಕ್ಕಿದ್ದು.

ವಿಳಾಸ:— ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ನಂ. ೨ ಪೋಸ್ಟ ಬನವಾಸಿ ಉತ್ತರ ಕಾನಡಾ.

ದಿ ಧಾರವಾಡ ಅರ್ಬನ ಕೋ
ಆಪರೆಟಿವ್ ಬ್ಯಾಂಕ ಲಿಮಿಟೆಡ
ಮುಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ ಕೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶೇಷ್ಠವಾದ ಸ್ಥಾನ.

ಖಂಡಿಗೊಂದು ಲಕ್ಷದ ಮೇಲುಂಟು. ಪಳಿ ಹುಟ್ಟಿ ಕೊಡಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ಸಿಮಿತ್ತದ ಕಾರ್ಯಮ ಮತ್ತು ಬೇಳೆ ತರಹ ಡಿವಿಡೆಂಡಿಗೆ ಜಾಸ್ತಿ ಒಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಸುಬ್ಬರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ವಿಜಯದ ವರ್ಗಣಿ ದರ

ನಿತ್ಯ ಪತ್ರಿಕೆಗೆ

೧೫ ತಿಂಗಳಿಗೆ	ರೂ. ೧೫-೮-೦
೬ ,,	೬-೦-೦
೩ ,,	೪-೮-೦
ವಾರ ಪತ್ರಿಕೆಗೆ ೧ ವರ್ಷಕ್ಕೆ	೩-೧೫-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಿ.

ಮ್ಯಾ ವಿಜಯ ಧಾರವಾಡ

ನೋಟೀಸಿನವರಗಳು

ಸಿಂಗಲ ಕಾಲಮಿನ ಹತ್ತು ಪಳಿಗೆಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಬೆಂದೂವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಸರಕಾರಿ, ಮ್ಯುನಿಸಿಪಾಲಿಟಿ, ಲೋಕಲಬೋರ್ಡ ಕಾರ್ಖಾನೆ ಬ್ಯಾಂಕು ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾಲಿಗೆ ಮೂರಾಣೆ ಇಂಚ್ಚಿನಿಂದ ಅವಾರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಅದು ಆಣೆ ಡಬಲ ಕಾಲಮಿನ ಪಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹಿರಾತುಗಳನ್ನು ಕೊಡುವವರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು:

ಮ್ಯಾನೇಜರ ವಿಜಯ ಧಾರವಾಡ.

ವಿಜಯ.

ಳುಕ್ಯ ವಿಕ್ರಮ ವರ್ಷ ಲಾಗ ಮಾಘ ಶುದ್ಧ ೫

ಅಲ್ಲಾಬಾದಿನ ಕಡೆಗೇ ಜಗತ್ತಿನ ಲಕ್ಷ್ಯವು.

ಅಲ್ಲಾಬಾದಿನಲ್ಲಿ ಹೋದ ಬುಧವಾರದಿಂದ ಸೇರುತ್ತಾ ಬಂದ ಕಾಂಗ್ರೆಸದ ವರ್ಕಿಂಗ ಕಮೀಟಿ ಸಭೆಗೆ ಜಗತ್ತಿನ ಲಕ್ಷ್ಯ ಹತ್ತಿದೆ. ಆಲ್ಲಿಯ ವಿಷಯವು ಗುಪ್ತವಾಗಿ ನಡೆದಿದ್ದು, ನಿರ್ಣಯವಾದ ಬಳಿಕ ಪ್ರೆಸನೋಟಿನ ಸ್ವರೂಪದಿಂದ ಜಾಹೀರ ಮಾಡಲ್ಪಡುವದು.

ಮುನ್ನಾ ದಿವಸ ಪಂಡಿತ ಮೋತಿಲಾಲರ ಆನಂದಭುವನ ಅಥವಾ ಸ್ವರಾಜ್ಯಭುವನದಲ್ಲಿ ಪೂರ್ವಾಲೋಚನೆ ಕಮೀಟಿ ಕೂಡಿತು. ಕಾಂಗ್ರೆಸದ ವರ್ಕಿಂಗ ಕಮೀಟಿಯ ಎಲ್ಲ ಮೆಂಬರರು ಇನ್ನೂ ಬಂದಿಲ್ಲ. ಪಂಡಿತ ಮೋತಿಲಾಲರ ಪ್ರಕೃತಿಯು ನೆಗಾಗುತ್ತಾ ಬಂದಿದ್ದು, ಆವರಿಗೆ ಮೆ. ಮ್ಯಾಕಡೋನಾಲ್ಡ ಸಾಹೇಬರ ಭಾಷಣವನ್ನು ಪೂರಾ ಓದಿ ತೋರಿಸಿದರು. ಅವರ ವಿಚಾರದಿಂದಲೇ ಮುಂದಿನ ಎಲ್ಲ ಕೆಲಸ ನಡೆಯುವದು.

ಆ ಹೊಸ್ತು ಕಮೀಟಿಗೆ ಬೂಡದವರೆಂದವರಲ್ಲಿ ಹಕೀಮ್ ಸಯ್ಯದ ಮಹಮದ್ ಖಾಬೂ ರಾಜೇಂದ್ರ ಪ್ರಸಾದ, ಕೆ. ಎಮ್ಮ. ಮುನಸಿ ಇವರೇ ಪ್ರಮುಖರಾಗಿದ್ದರು. ಮೆ. ಮ್ಯಾಕಡೋನಾಲ್ಡ ಸಾಹೇಬರ ಭಾಷಣದ ಚರ್ಚೆ ಚಿಕಿತ್ಸೆ ನಡೆಯಿತು. ಈ ಭಾಷಣವು ಮೆ. ಸ್ಲೊಕೊಂಬಿಸಾಹೇಬರು ಮತ್ತು ಪಂಡಿತರ ನಡುನೆ ಆದಂಥ ವಿಚಾರವಿನಿಮಯವನ್ನು ಹೆಚ್ಚು ನಿವರಿಸಿ ಹೇಳಿದಂತುಂಟು; ವಿಚಾರ ಮಾಡಿದರೆ- ಇದು ಸುಗುಣಬ್ರಮ್ಹವೂ ಆಗುವದು, ನಿರ್ಗುಣಬ್ರಮ್ಹವೂ ಆಗುವದೆಂದು ಶ್ರೀ. ಮುನಸಿಯವರು ಅಭಿಪ್ರಾಯಪಟ್ಟರು. ಈ ಭಾಷಣದ ಬಗ್ಗೆ ನಿಶ್ಚಿತವಾಗಿ ಇಂದೇ ಏನೂ ಹೇಳಲಿಕ್ಕಾಗುವದಿಲ್ಲ. ವರ್ಕಿಂಗ ಕಮೀಟಿಯಲ್ಲಾಗುವ ತರಾವನ್ನ ತನಕ ಯಾರೊಬ್ಬರು ತಡೆಯತಕ್ಕದ್ದೆಂದು ಡಾಕ್ಟರ ಮುಖ್ಯರು ಅಂದಿದ್ದಾರೆ. ಖಾಬೂ ರಾಜೇಂದ್ರ ಪ್ರಸಾದರಂತೂ ಏನೂ ಹೇಳಲಿಲ್ಲ. ಕಾಂಗ್ರೆಸದ ಮುಖಂಡರು ಯಾವ ಮಾತನ್ನೂ ಸ್ಪಷ್ಟವಾಗಿ ಹೇಳದ್ದರಿಂದ, ಒಬ್ಬ ಪತ್ರಕಾರರು ಅಭಿಪ್ರಾಯಪಡುವಂತೆ ಮಂತ್ರಿಯವರ ಭಾಷಣವು ಬಂಗಾಲಿ ಜಾದೂವಿಗಾರನ ಕಣ್ಣು ಕಟ್ಟುವ ವಿದ್ಯೆಯಂತಾಗಿರುತ್ತದೆಂದು ಕಾಂಗ್ರೆಸದ ವಿಚಾರದಿಂದ ಸದ್ಯದಲ್ಲಿ ಹೇಳುವಂತಾಗಿದೆ.

ಸರಕಾರದವರು ಕಾಂಗ್ರೆಸದ ವರ್ಕಿಂಗ ಕಮೀಟಿಯನ್ನು ಬೇಕಾಯಿದೆಸೀರ ಮಾಡಿದ್ದಾರೆ ನಾವು ಕಮೀಟಿ ಕೂಡಿ ವಿಚಾರ ಮಾಡುತ್ತಿರುವಾಗ, ಸಜ್ಜನರಾದಂಥ ಪೋಲಿಸರು ಬಂದು, ನಮ್ಮನ್ನು ಹಿಡಕೊಂಡು ಹೋದರೆ- ನಮ್ಮ ಕಮೀಟಿಯು ಕಾರಾಗೃಹದಲ್ಲಿಯೇ ಇಡೆಮುದೇಕಾದೀತೆಂದು ಡಾಕ್ಟರ ಮಹಮದರು ವಿನೋದವಾಡಿದ್ದಾರೆ ಇವರನ್ನು ಹಿಡಿದು ಕಾಂಗ್ರೆಸದ ಮತ ಜಾಹೀರ ಮಾಡಲಿಕ್ಕೆ ವಿಘ್ನ ತರುವಾರದು; ಕಮೀಟಿ ಕೂಡಗೊಡುವೇಕೆಂದು ಪಾಥೊನಿಯರ ಸಕ್ರವು ಸಂಕಾರಕ್ಕೆ ಸೂಚನೆ ಮಾಡಿರುತ್ತದೆ.

ವರ್ಕಿಂಗ ಕಮೀಟಿಯವರು ಯಾವ ನಿರ್ಣಯ ಮಾಡಿದರೂ ಕೊನೆಯಲ್ಲಿ ಪಂಡಿತ ಜವಾಹರಲಾಲ ಮತ್ತು ಮಹಾತ್ಮರ ಒಪ್ಪಿಗೆ ಬೇಕಾಗುತ್ತದೆ. ಇಬ್ಬರು ಐದಾರುನೂರು ಮೈಲುಗಳ ಅಂತರದಲ್ಲಿದ್ದಾರೆ. ಪುನಃ ಇನ್ನೊಮ್ಮೆ ಸಭ್ಯ ಜಯಕರರಂಥ ಶಿಸ್ತಾಯಿಯು ಕಾಂಗ್ರೆಸದ ಜೇಲಿನ ಹೊರಗೆ ಮತ್ತು ಜೈಲಿಗಿರುವಂಥವರ ನಡುವೆ ನಡೆಯುವೇಕಾಗುವದು.

ಪಾಶ್ಚಿಮಾಯ ಪತ್ರಗಳ ಮತವು.

—೦*೦—

ಕಾಂಗ್ರೆಸಕ್ಕೆ ಅನುಕೂಲವಾಗಿರುವಂಥ ವರ್ತಮಾನಪತ್ರಗಳು ಮಂತ್ರಿಯವರ ಭಾಷಣಕ್ಕೆಷ್ಟೂ ಮಹತ್ವ ಕೊಟ್ಟಿಲ್ಲ.

ಅಮೃತ ಬಜಾರ್-

ಮಂತ್ರಿ ತುಸು ಬಾಗುಲು ಬಹಳ ವೆಸಾ ಹಾತಿನೆ ಸ್ವರಾಜ್ಯ ಸಂಬಂಧವಾದ ಶಬ್ದಗಳೇ ಇರುವದಿಲ್ಲ.

ಬಾಂಬೆ ಕ್ರಾನಿಕಲ್-

೨೦ನೆಯ ಶತಮಾನದಷ್ಟಿ ಜನರನ್ನು ಇಷ್ಟು ಸಹಜವಾಗಿ ಹುಚ್ಚರಾಗಿ ಮಾಡಲಿಕ್ಕೆ ಒಪತ್ತದೆಂದು ಮೆ. ಮ್ಯಾಕಡೋನಾಲ್ಡ ಸಾಹೇಬರು ತಿಳಿಯಕ್ಕಿದ್ದಿಲ್ಲ.

ಲಿಬರ್ಟಿ-

ಲೋಕ ಸ್ತ್ರೀಯಮಾಗುವಂಥ ಕೆಲವು ಕುರುಹುಗಳಿರುವದು ನಿಜ. ಆದರೆ ಮನ್ವಾಳನ್ನೂ, ರೊಕ್ಕವನ್ನೂ ತಮ್ಮ ಪಕ್ಷಕ್ಕೆಳೆದುಕೊಳ್ಳುವದರಲ್ಲಾಗಿಯೇ ಈ ಹುಚ್ಚಿಕೆ ಏಕೆರಬಾರದು.

ಮನ್ವಾಳರ ಮತವು-

ಬಂಗಾಲದಲ್ಲಿ ಮನ್ವಾಳರ ಅಗ್ರಗಣ್ಯ ಪತ್ರವಾದ ಬಂಗಾಲಿಯು ಅನ್ನುವದೇನಂದರೆ-

ಇಂಗ್ಲೆಂಡವು ತನ್ನ ಅಂತಃಕರಣದಲ್ಲಿ ಬಡಲಾಗಿರುತ್ತದೆಂಬದನ್ನು ಕೃತಿಯಿಂದ ಸಿದ್ಧಮಾಡಿ ತೋರಿಸದೆ ಇನ್ನು ಮಹಾತ್ಮರೂ ಬದಲು ಮಾಡುವಂಥ ಕಾಲ ಬಂತು. ಆವರ ಹೃದಯವು ಯಾವಾಗಲೂ ಶುದ್ಧ ಮತ್ತು ನಿರ್ಮಲವಾಗಿರುವದು. ಆದರೆ ಆವರು ತಮ್ಮ ರಾಜನೀತಿಯನ್ನು ಬದಲಿಸಕ್ಕದ್ದು.

ಪ್ರತಿಯೋಗಿ ಸಹಕಾರಿಗಳ ಮತ-

ಬ್ಯಾರಿಸ್ಟರ ಜಯಕರರ ತರುಣಾಯನಾ ಶ್ರೀ ಕೇಳಕರರೊಬ್ಬರೇ ಪ್ರತಿಯೋಗಿ ಸಹಕಾರಿಯಾಗಿದ್ದಾರೆ. ಇವರು ಅಂದದ್ದೇನಂದರೆ-

ಮೆ. ಮ್ಯಾಕಡೋನಾಲ್ಡ ಸಾಹೇಬರ ಸಮೀಕ್ಷೆಯು ಸಹ್ಯವಾಗದಿದ್ದದ್ದು ವ್ಯಸನದ ಸಂಗತಿಯು ಕಾರಣವಿಲ್ಲದೆಭಂಗವನ್ನು ಸಿದ್ಧಿಸಿದರೆ- ಮುಯ್ಯುವೆಂದು ಸರಕಾರದವರು ರಾಜಕೀಯ ಕೈದಿಗಳಿಗೆ ಕ್ಷಮೆಮಾಡುತ್ತೇವೆಂದು ಅನ್ನುವದು ನೋಡಲಿಕ್ಕೆ ನೆಟ್ಟಗೆ ಕಾಣಿಸುವದಿಲ್ಲ. ರಾವುಂಡ ಟೇಬಲದ ನಿರ್ಣಯಕ್ಕೆ ಒಪ್ಪಿರೆಂದು ಬಲಾತ್ಕಾರ ಪಡಿಸಬೇಕಷ್ಟಿತ್ತಿರುವಷ್ಟರೇ ಯೂವ್ವದೊಂದು ಕರ್ಮ ಹಾಕದೆ, ರಾಜಕೀಯ ಕೈದಿಗಳನ್ನು ಭಂಧಮುಕ್ತ ಮಾಡುವದೇ ದೇಶದಲ್ಲಿ ಹೊಸೆನಿಸುವಂಕೆ ಹೆಚ್ಚು ಪರಿಣಾಮವನ್ನುಂಟುಮಾಡುವದು.

ಲಂಡನದ ಪತ್ರಗಳ ಮತ.

—೫-೫೦*೫-೫—

ಹಿಂದುಸ್ಥಾನದಲ್ಲಿರುವ ಇಂಗ್ರೇಜಿ ಪತ್ರಗಳು ಕಾಂಗ್ರೆಸದ ಇತ್ಯರ್ಥಗಳೆಲ್ಲ ಪೂರ್ಣವಾನೆಂದು ಕಾಂಗ್ರೆಸದವರು ಹಿರಿ ಹಿರಿ ಹಿಗ್ಗಿ ಉಬ್ಬುವಂಥ ಅಭಿಪ್ರಾಯಪಟ್ಟಿವೆ. ಲಂಡನದಲ್ಲಿ ಲೇಬರ ಮತ್ತು ಲಿಬರಲ ಪತ್ರಗಳು ರಾವುಂಡ ಟೇಬಲಿನ ಬೆನ್ನು ಹಪ್ಪರಿಸಿದ್ದು, ಕಾನ್ಸರವೇಟಿವ್ವರ ಪತ್ರಗಳು ಖಾಂಜಬನ್ನು ಮಾಡಿವೆ. ಮಾದರಿಗಾಗಿ ಕೆಲವನ್ನು ಇದರಿಸಿ ಕೊಡುತ್ತೇವೆ.

ಮಂತ್ರಿಗಳ ಡೇಲಿಹೆರಾಲ್ಡ-

ಮೆ ಮ್ಯಾಕಡೋನಾಲ್ಡ ಸಾಹೇಬರು ಕೊಡಬಯಿಸಿದ ಜವಾಬದಾರ ರಾಜ್ಯ ಪದ್ಧತಿಯು ಮುಹಾತ್ಮರು ಬೇಡಿ ಬಯಿಸುವಂಥ ಸ್ವಾತಂತ್ರ್ಯದ ಸತ್ವವಾಗಿರುತ್ತದೆ. ಇಂಗ್ಲಂಡವು ಹೆಚ್ಚಿನದೂ ಕೊಟ್ಟಿಲ್ಲ. ಹಿಂದುಸ್ಥಾನವು ಇದಕ್ಕೂ ಕಡಿಮೆಯೂ ಬೇಡಿಲ್ಲ. ತಾನು ಯಾತರ ದೆಸೆಯಿಂದ ಹೋರಾಡುತ್ತಿದ್ದಿತ್ತು ಅದೇ ದೊರೆತ ಬಳಿಕ ಹಿಂದುಸ್ಥಾನವು

ಅದರ ಅಂಗೀಕಾರ ಮಾಡದೆ ಅಲಕ್ಷ್ಯ ಮಾಡಬಾರದು. ಇದು ಬೇಬಲಿನ ಶ್ರೇಷ್ಠವಾದ ಸಾಧನೆಯಾಗಿರುತ್ತದೆ.

ನ್ಯೂಡ ಕ್ರಾನಿಕಲ- (ಲಿಬರಲ)

ಹೊಸ ರಾಜ್ಯಘಟನೆಗೆ ಮೂರು ಪಕ್ಷಗಳ ಸಮ್ಮತಿ ದೊರೆತಿದೆ. ಈ ಸೂತ್ರಗಳನ್ನು ಕೃತಿಯು ಕರುನ್ನಿವ ಭಾರವು ಹಿಂದೀ ಜನರ ಮೇಲುಬೀಳುವಾಗಿದೆ. * ಕೊಡುವಿಕೆಯನ್ನು ಅಂಗೀಕರಿಸುವದು ಅಧಿಕಾರ ಅಲ್ಲಗಳೆಯುವದು ಏಁ. ಗಾಂಧಿ ಮತ್ತು ಅವರ ಪಕ್ಷದವರನ್ನೆ ನಲಂಬಿಸಿದೆ.

ಮಾರ್ನಿಂಗ ಪೋಸ್ಟ (ಕಾನ್ಸರವೇಟಿವ್ಹ)-

ಮಂತ್ರಿಯವರು ಹೇಳಿದಂಥ ಎಲ್ಲ ಹಕ್ಕುಗಳನ್ನು ಕೊಟ್ಟದ್ದಾದರೆ- ಬ್ರಿಟಿಶರ ಹಿಂದುಸ್ಥಾನದ ಸಾಮ್ರಾಜ್ಯವೇ ನಾಶವಾಯಿತೆಂದು ತಿಳಿಯಿರಿ.

ಹಿಂದುಸ್ಥಾನದ ಹುಟ್ಟವೈರಿಗಳ ಮತವು.

—(*)—

ಸಂಜಾಬದ ಗವರ್ನರರಾಗಿ, ಡಾಹುಶಶಾ ಹಿಂದುಲ್ಲಿ ಮೆರೆದ ಸರ ಒಡ್ವಾಯರ ಮತ್ತು ಕಾನ್ಸರವೇಟಿವ್ಹರ ಕಾಲದಲ್ಲಿ ಮಂತ್ರಿಯಾಗಿದ್ದ ಏಁ. ಜರ್ಜಹಿಲ್ಲ ಸಾಹೇಬರು ಹಿಂದುಸ್ಥಾನದ ಗ್ರಹದ ಮೇಲೆ ಹುಟ್ಟಿದಂಥ ಜನ್ಮದ ವೈರಿಯಾಗಿದ್ದಾರೆ. ಇವರು ಅತ್ಯಂತ ಭಯಂಕರ ಮತಪ್ರಕಟಮಾಡಿದ್ದಾರೆ.

ಜರ್ಜಹಿಲ್ಲ-

ಇಂಗ್ಲಂಡವು ಹಿಂದುಸ್ಥಾನದ ಸಂಬಂಧವನ್ನು ಸೂರಾ ಕಡಕೊಳ್ಳಲಿಕ್ಕೆ ಸಿದ್ಧವಾಯಿತೆಂದೇ ಯಾವ ವನೊಬ್ಬ ಶ್ರಯಸ್ಥನು ಸ್ಪಷ್ಟವಾಗಿ ಅನ್ನಬಹುದು ಈ ಪ್ರಕಾರ ಬ್ರಿಟಿಶ ಜನಾಂಗದ ಮತವಿರುತ್ತದೆಂದು ನಾನೆಂದಿಗೂ ಅನ್ನಲಾರೆನು. ಅದು ಹಾಗೇ ಆಗಿದ್ದರೆ- ಜಗತ್ತಿನಲ್ಲಿ ಇಂಗ್ಲಂಡದ ದೊಡ್ಡಸ್ತಿಕೆ ಮತ್ತು ಸಾಮರ್ಥ್ಯಕ್ಕೆ ಕಡೆತನಕ ಅಳಿಗಾಲ ಬಂತೆಂದು ತಿಳಿಯಿರಿ.

ಡಾಯರ-

ಬ್ರಿಟಿಶ ಸಿಂಹವು ಸಾಯುವ ಸಂಧದಲ್ಲಿದ್ದು, ಅದರ ತೊಗಲು ಬೇರೆ ಮಾಡಿಕೊಳ್ಳಿರೆಂದು ರಾವಂಡ ಟೇಬಲಪನ್ನು ಕರೆದಂತೆಯೂ ಹಿಂದುಸ್ಥಾನ ವಿಷಯಕವಾದ ಜವಾಬದಾರಿ ಮತ್ತು ಬ್ರಿಟಿಶ ರಾಜ್ಯಭಾರವನ್ನು ಬಿಟ್ಟುಕೊಟ್ಟಂತೆಯೂ ಆಗುತ್ತದೆ.

ಅಸೆಂಬ್ಲಿಯಲ್ಲಿ ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿ, ಇದರ ಮುಂದಾಳುತ್ವವನ್ನು **ದಿವಾನ ಬಹಾದ್ದೂರ ರಂಗಾಚಾರ್ಯರಿಗೆ ಕೊಟ್ಟಿದ್ದಾರೆ.**

ಇದೇ ಅಸೆಂಬ್ಲಿಯಲ್ಲಿ ಜಮೀನ್ದಾರರ ಪಕ್ಷ ನಿರ್ಮಾಣವಾಯಿತು. **ತೊಳ್ತೊಂಗಡದ ಶ್ರೀ ವಾಸುದೇವರಾಜರು** ಮುಖ್ಯಾಧಿಕಾರಿಯಾಗಿದ್ದಾರೆ. ರಾಷ್ಟ್ರೀಯ ಪಕ್ಷದ ವಿರುದ್ಧ ನಡೆಯುತಕ್ಕದ್ದಲ್ಲೆಂದು ಇವರ ವಿಚಾರವಾಗಿದೆ.

ಮೊಂತ್ರಿಯ ಮುಂತ್ರವಾಯಿತು;
ತಂತ್ರದ ವಿಚಾರ.

—(೦)—

ಮೆ. ಮ್ಯಾಕಡೋನಾಲ್ಡ ಸಾಹೇಬರು ಸ್ವರಾಜ್ಯ ವಿಷಯವಾಗಿ ಹೇಳಿದ್ದು ಮುಂತ್ರವಾಯಿತು. ಈ ನಂತರ ಅದೆ ತಂತ್ರಗಳಾಗಬೇಕಾಗಿವೆ. ಭಾವೀ ಹ್ಯಾಯಿಸರಾಯರಾದ ಲಾರ್ಡ ವಿಲಿಂಗಡನ್ನ ಕಾಹೇ ಬರು ಇಷ್ಟರಲ್ಲಿ ಲಂಡನಕ್ಕೆ ಬರುವರು. ಮಂತ್ರಿಯವರು ಇವರ ಕೂಡ ತಂತ್ರಗಳನ್ನು ಕುರಿತು ವಿಚಾರ ಮಾಡುವರು.

ಜಾದಶಹರ ವರ್ಧಂತಿಯ ದಿವಸ ರಜೆಯುಲ್ಲ

—(೦)—

